Re. No. D. 221

सत्यमेव जयते

# भारत का राजपत्र
# The Gazette of India
# ಭಾರತ ರಾಜಪತ್ರ

( EXTRAORDINARY )
( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| सं. १ | नई दिल्ली, गुरुवार, जून ४, २०२० | ज्येष्ठ २२, १९४२ (शका) | खंड ४९ |
| No. 1 | New Delhi, Thursday, June 4, 2020 | Jyeshta 22, 1942 (Saka) | Vol. 49 |
| ನಂ. ೧ | ನವ ದೆಹಲಿ, ಗುರುವಾರ, ಜೂನ್ ೪, ೨೦೨೦ | ಜ್ಯೇಷ್ಠ ೨೨, ೧೯೪೨ (ಶಕ) | ಸಂಪುಟ ೪೯ |


**Ministry of Law and Justice**
Legislative Department
New Delhi, 04th June, 2020

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**ವಿಧಾಯೀ ಇಲಾಖೆ**
**ನವದೆಹಲಿ, 04ನೇ ಜೂನ್ 2020**

The Translation in Kannada of the following Acts, namely:- (1) The Public Debt Act, 1944 (18 of 1944) (2) The Dock Workers (Safety, Health and Welfare) Act, 1986 (54 of 1986) (3) The Building and Other Construction Workers' (Regulation of Employment and Conditions of Service) Act, 1996 (27 of 1996) (4) The Building and Other Construction Worker's Welfare Cess Act, 1996 (28 of 1996) (5) The Petroleum and Natural Gas Regulatory Board Act, 2006 (19 of 2006) (6) The Warehousing (Development and Regulation Act), 2007 (37 of 2007) (7) The Carriage by Road Act, 2007 (41 of 2007) (8) The Collection of Statistics Act, 2008 (7 of 2009) (9) The Protection of Children from Sexual Offences Act, 2012 (32 of 2012) (10) The Prohibition of Employment as Manual Scavengers and their Rehabilitation Act, 2013 - are hereby published under the authority of the President and shall be deemed to be authoritative text thereof in Kannada under clause (a) of Section 2 of the Authoritative Texts (Central Laws) Act, 1973 (50 of 1973)

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಸಾರ್ವಜನಿಕ ಋಣ ಅಧಿನಿಯಮ, 1944 (1944ರ 18) (2) ಹಡಗುಕಟ್ಟೆ ಕೆಲಸಗಾರರ (ಸುರಕ್ಷತೆ, ಆರೋಗ್ಯ ಮತ್ತು ಕಲ್ಯಾಣ) ಅಧಿನಿಯಮ. 1986 (1986ರ 54) (3) ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ (ನಿಯೋಜನೆ ಮತ್ತು ಸೇವಾ ಷರತ್ತುಗಳ ವಿನಿಯಮ) ಅಧಿನಿಯಮ, 1996 (1996ರ 27) (4) ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಕಲ್ಯಾಣ ಉಪಕರ ಅಧಿನಿಯಮ, 1996 (1996ರ 28) (5) ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ವಿನಿಯಾಮಕ ಮಂಡಳಿ ಅಧಿನಿಯಮ, 2006 (2006 ರ 19) (6) ಉಗ್ರಾಣ ಸೌಲಭ್ಯ (ಅಭಿವೃದ್ಧಿ ಮತ್ತು ವಿನಿಯಮ) ಅಧಿನಿಯಮ, 2007 (2007ರ 37) (7) ರಸ್ತೆ ಮೂಲಕ ಸಾಗಣೆ ಅಧಿನಿಯಮ, 2007 (2007ರ 41) (8) ಅಂಕಿ ಅಂಶಗಳ ಸಂಗ್ರಹಣಾ ಅಧಿನಿಯಮ, 2008 (2009ರ 7) (9) ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಅಧಿನಿಯಮ, 2012 (2012ರ 32) (10) ಮಲಹೊರುವ ಜಾಡಮಾಲಿಗಳ ನಿಯೋಜನೆ, ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ, 2013– ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

## ಸಾರ್ವಜನಿಕ ಋಣ ಅಧಿನಿಯಮ, 1944

**(1944ರ ಅಧಿನಿಯಮ ಸಂಖ್ಯೆ 18)**

[22ನೇ ನವೆಂಬರ್, 1944]

ಸರ್ಕಾರಿ ಭದ್ರತಾ ಪತ್ರಗಳಿಗೆ ಸಂಬಂಧಪಟ್ಟ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ ಹಾಗೂ ಸರ್ಕಾರದ ಸಾರ್ವಜನಿಕ ಋಣವನ್ನು ಭಾರತದ ರಿಸರ್ವ್ ಬ್ಯಾಂಕು ನಿರ್ವಹಿಸುವ ಅಧಿನಿಯಮ.

ಸರ್ಕಾರಿ ಭದ್ರತಾ ಪತ್ರಗಳಿಗೆ ಸಂಬಂಧಪಟ್ಟ ಕಾನೂನನ್ನು ಕ್ರೋಡೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ಹಾಗೂ ಸರ್ಕಾರದ ಸಾರ್ವಜನಿಕ ಋಣವನ್ನು ಭಾರತದ ರಿಸರ್ವ್ ಬ್ಯಾಂಕು ನಿರ್ವಹಿಸುವುದು ವಿಹಿತವಾಗಿರುವುದರಿಂದ;

ಅದನ್ನು, ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಸಾರ್ವಜನಿಕ ಋಣ ಅಧಿನಿಯಮ, 1944 ಎಂದು ಕರೆಯತಕ್ಕದ್ದು.

(2) * * * *

(3) ಅದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು.

**1ಎ. ಈ ಅಧಿನಿಯಮವು ಅನ್ವಯವಾಗುವ ಭದ್ರತಾ ಪತ್ರಗಳು:–** ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆಯೇ ಆಗಲಿ ಅಥವಾ ತರುವಾಯವೇ ಆಗಲಿ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಸೃಜಿಸಿದ ಮತ್ತು ಹೊರಡಿಸಿದ ಸರ್ಕಾರಿ ಭದ್ರತಾ ಪತ್ರಗಳಿಗೆ ಈ ಅಧಿನಿಯಮವು ಅನ್ವಯಿಸತಕ್ಕದ್ದು.

**2. ಪರಿಭಾಷೆಗಳು:–**ಈ ಅಧಿನಿಯಮದಲ್ಲಿ, ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,–

(1) "ಬ್ಯಾಂಕು" ಎಂದರೆ ಭಾರತ ರಿಸರ್ವ್ ಬ್ಯಾಂಕು ಎಂದು ಅರ್ಥ;

(1ಎ) ಯಾವುದೇ ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ "ಸರ್ಕಾರ" ಎಂದರೆ ಭದ್ರತಾ ಪತ್ರವನ್ನು ಹೊರಡಿಸುವ ಕೇಂದ್ರ ಅಥವಾ ರಾಜ್ಯ ಸರ್ಕಾರ ಎಂದು ಅರ್ಥ;

(2) "ಸರ್ಕಾರಿ ಭದ್ರತಾ ಪತ್ರ" ಎಂದರೆ,–

(ಎ) ಸಾರ್ವಜನಿಕ ಸಾಲವನ್ನು ಎತ್ತುವ ಉದ್ದೇಶಕ್ಕಾಗಿ ಸರ್ಕಾರವು ಸೃಜಿಸಿದ ಮತ್ತು ಹೊರಡಿಸಿದ, ಮತ್ತು ಈ ಕೆಳಕಂಡ ರೂಪಗಳ ಪೈಕಿ ಒಂದು ರೂಪದಲ್ಲಿರುವ ಭದ್ರತಾ ಪತ್ರ, ಎಂದರೆ:–

(i) ಬ್ಯಾಂಕಿನ ಪುಸ್ತಕಗಳಲ್ಲಿ ನೋಂದಾಯಿಸುವುದರ ಮೂಲಕ ವರ್ಗಾವಣೆ ಮಾಡಬಹುದಾದ ಸ್ಟಾಕು; ಅಥವಾ

(ii) ಆದೇಶದಂತೆ ಕೊಡಬೇಕಾದ ಪ್ರಾಮಿಸರಿ ನೋಟು; ಅಥವಾ

(iii) ಧಾರಕನಿಗೆ ಕೊಡಬೇಕಾದ ಧಾರಕ ಬಂಧಪತ್ರ (ಬೇರರ್ ಬಾಂಡ್); ಅಥವಾ

(iv) ಈ ಬಗ್ಗೆ ನಿಯಮಿಸಿದ ನಮೂನೆ.

---

* 1ನೇ ಮೇ 1946 ರಂದು ಜಾರಿಗೆ ಬಂದಿದೆ. ನೋಡಿ 1946ರ ಭಾರತ ರಾಜಪತ್ರದ ಭಾಗ – 1, ಪುಟ – 575.

(ಬಿ) ನಿಯಮಿಸಬಹುದಾದಂಥ ರೂಪದಲ್ಲಿರುವ ಮತ್ತು ಈ ಅಧಿನಿಯಮದ ಅಂಥ ಉದ್ದೇಶಗಳಿಗಾಗಿ ಸರ್ಕಾರವು ಸೃಜಿಸಿದ ಮತ್ತು ಹೊರಡಿಸಿದ ಯಾವುದೇ ಇತರ ಭದ್ರತಾ ಪತ್ರ ಎಂದು ಅರ್ಥ;

(3) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಿದ ಎಂದು ಅರ್ಥ;

(4) "ಪ್ರಾಮಿಸರಿ ನೋಟು" ಎಂಬುದು ಖಜಾನೆ ಬಿಲ್ಲನ್ನು ಒಳಗೊಳ್ಳುತ್ತದೆ.

3. **ಸರ್ಕಾರಿ ಭದ್ರತಾ ಪತ್ರಗಳ ವರ್ಗಾವಣೆ:**-(1) 5ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಸರ್ಕಾರಿ ಭದ್ರತಾ ಪತ್ರದ ವರ್ಗಾವಣೆಯನ್ನು, ಅದು ಯಾವ ವರ್ಗಕ್ಕೆ ಸಂಬಂಧಿಸಿದೆಯೋ, ಆ ವರ್ಗದ ಭದ್ರತಾ ಪತ್ರಗಳನ್ನು ವರ್ಗಾಯಿಸಲು ನಿಯಮಿಸಿದ ರೀತಿಯಲ್ಲಿ ಮಾತ್ರವೇ ಮಾಡತಕ್ಕದ್ದು, ಮತ್ತು,-

(i) ಕೇಂದ್ರ ಸರ್ಕಾರವು ಹೊರಡಿಸಿದ ಭದ್ರತಾ ಪತ್ರದ ಸಂಬಂಧದಲ್ಲಿ 1946ರ ಏಪ್ರಿಲ್ 30ರ ತರುವಾಯ ಮಾಡಿದ,

(ii) ಎ ಭಾಗದಲ್ಲಿನ ರಾಜ್ಯ ಸರ್ಕಾರವು ಹೊರಡಿಸಿದ ಭದ್ರತಾ ಪತ್ರದ ಸಂಬಂಧದಲ್ಲಿ 1949ರ ಮಾರ್ಚ್ 31ರ ತರುವಾಯ ಮಾಡಿದ,

(iii) ಜಮ್ಮು ಮತ್ತು ಕಾಶ್ಮೀರವನ್ನು ಹೊರತುಪಡಿಸಿ ಬಿ ಭಾಗದಲ್ಲಿನ ರಾಜ್ಯ ಸರ್ಕಾರವು ಹೊರಡಿಸಿದ ಭದ್ರತಾ ಪತ್ರದ ಸಂಬಂಧದಲ್ಲಿ 1956ರ ಅಕ್ಟೋಬರ್ 14ರ ತರುವಾಯ ಮಾಡಿದ,

(iv) ಜಮ್ಮು ಮತ್ತು ಕಾಶ್ಮೀರವನ್ನು ಹೊರತುಪಡಿಸಿ ಯಾವುದೇ ರಾಜ್ಯ ಸರ್ಕಾರವು 1956ರ ನವೆಂಬರ್ 1ರಂದು ಅಥವಾ ಆ ತರುವಾಯ ಹೊರಡಿಸಿದ ಭದ್ರತಾ ಪತ್ರದ ಸಂಬಂಧದಲ್ಲಿ, ಆ ದಿನದಂದು ಅಥವಾ ಆ ತರುವಾಯ ಮಾಡಿದ, ಮತ್ತು

(v) ಜಮ್ಮು ಮತ್ತು ಕಾಶ್ಮೀರ ರಾಜ್ಯ ಸರ್ಕಾರವು 1972ರ ಸೆಪ್ಟೆಂಬರ್ 1ರಂದು ಅಥವಾ ಆ ತರುವಾಯ ಹೊರಡಿಸಿದ ಭದ್ರತಾ ಪತ್ರದ ಸಂಬಂಧದಲ್ಲಿ, ಆ ದಿನದಂದು ಅಥವಾ ಆ ತರುವಾಯ ಮಾಡಿದ

– ಯಾವುದೇ ಸರ್ಕಾರಿ ಭದ್ರತಾ ಪತ್ರದ ವರ್ಗಾವಣೆಯು,-

(ಎ) ಅದು ಭದ್ರತಾ ಪತ್ರದ ಸಂಪೂರ್ಣ ಸ್ವಾಮ್ಯವನ್ನು ಹಸ್ತಾಂತರಿಸುವುದೆಂದು ತಾತ್ಪರ್ಯವಾಗದಿದ್ದರೆ; ಅಥವಾ

(ಬಿ) ಅದು, ಭದ್ರತಾ ಪತ್ರವನ್ನು ಸರ್ಕಾರವು ಯಾವ ರೀತಿಯಲ್ಲಿ ಹೊಂದಿರಬೇಕೆಂದು ಸ್ಪಷ್ಟವಾಗಿ ತಿಳಿಸಿತ್ತೋ ಆ ರೀತಿಯಲ್ಲಿ ಹೊಂದಿರುವುದಕ್ಕೆ ಬಾಧಕವಾಗುವಂಥ ಸ್ವರೂಪದ್ದಾಗಿದ್ದರೆ,

– ಸಿಂಧುವಾಗತಕ್ಕದ್ದಲ್ಲ.

(2) ಈ ಪ್ರಕರಣದಲ್ಲಿರುವುದು ಯಾವುದೂ, ಈ ಅಧಿನಿಯಮದ ಮೇರೆಗೆ ಬ್ಯಾಂಕು ಮಾಡಿದ ಯಾವುದೇ ಆದೇಶಕ್ಕೆ ಅಥವಾ ನ್ಯಾಯಾಲಯವು ಬ್ಯಾಂಕಿನ ಮೇಲೆ ಮಾಡಿದ ಯಾವುದೇ ಆದೇಶಕ್ಕೆ ಬಾಧೆಯುಂಟುಮಾಡತಕ್ಕದ್ದಲ್ಲ.

4. **ಸರ್ಕಾರಿ ಭದ್ರತಾ ಪತ್ರಗಳ ವರ್ಗಾವಣೆಕಾರನು ಅದರ ಮೊಬಲಗಿಗೆ ಹೊಣೆಗಾರನಾಗತಕ್ಕದ್ದಲ್ಲ:**-ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 (1881ರ 26) ರಲ್ಲಿ ಏನೇ ಒಳಗೊಂಡಿದ್ದರೂ, ವ್ಯಕ್ತಿಯು ಸರ್ಕಾರಿ ಭದ್ರತಾ ಪತ್ರವನ್ನು ವರ್ಗಾವಣೆ ಮಾಡಿರುವ ಕಾರಣ ಮಾತ್ರದಿಂದಲೇ ಅದಕ್ಕೆ ಅಸಲು ಅಥವಾ ಬಡ್ಡಿ ರೂಪದಲ್ಲಿ ಬಾಕಿಯಿರುವ ಯಾವುದೇ ಹಣವನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದಲ್ಲ.

5. **ಸರ್ಕಾರಿ ಪದಗಳ ಧಾರಕರು ಸರ್ಕಾರಿ ಭದ್ರತಾ ಪತ್ರಗಳನ್ನು ಧಾರಣ ಮಾಡುವುದು:**- (1) ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚಿಸುವುದರ ಮೂಲಕ, ಈ ಉಪಪ್ರಕರಣವು ಯಾವ ಸರ್ಕಾರಿ ಪದಕ್ಕೆ ಅನ್ವಯವಾಗುತ್ತದೆಂದು ಘೋಷಿಸುತ್ತದೆಯೋ ಆ ಯಾವುದೇ ಸರ್ಕಾರಿ ಪದದ ಸಂದರ್ಭದಲ್ಲಿ ಸ್ಟಾಕು ಅಥವಾ ಪ್ರಾಮಿಸರಿ ನೋಟಿನ ನಮೂನೆಯಲ್ಲಿ ಸರ್ಕಾರಿ ಭದ್ರತಾ ಪತ್ರವನ್ನು ಆ ಪದದ ಹೆಸರಿನಲ್ಲಿ ಧಾರಣ ಮಾಡಬಹುದು.

(2) ಸರ್ಕಾರಿ ಭದ್ರತಾ ಪತ್ರವನ್ನು ಹಾಗೆ ಧಾರಣ ಮಾಡಿರುವಾಗ, ಆ ಪದದ ಪ್ರತಿಯೊಬ್ಬ ಧಾರಕನಿಂದ ಆ ಪದಕ್ಕೆ ಉತ್ತರವರ್ತಿಯಾಗಿ ಬರುವ ಧಾರಕನಿಗೆ ಮತ್ತು ಉತ್ತರವರ್ತಿಯು ಯಾವ ದಿನಾಂಕದಂದು ಆ ಪದದ ಪ್ರಭಾರವನ್ನು ವಹಿಸಿಕೊಳ್ಳುವನೋ ಆ ದಿನಾಂಕದಿಂದ ಯಾವುದೇ ಅಥವಾ ಹೆಚ್ಚಿನ ಹಿಂಬರಹವಿಲ್ಲದೆ ಅಥವಾ ವರ್ಗಾವಣೆ ಪತ್ರವಿಲ್ಲದೆ ವರ್ಗಾವಣೆಯಾಗಿದೆ ಎಂದು ಭಾವಿಸತಕ್ಕದ್ದು.

(3) ಪದದ ಧಾರಕನು ಹಾಗೆ ಧಾರಣ ಮಾಡಿರುವ ಸರ್ಕಾರಿ ಭದ್ರತಾ ಪತ್ರವನ್ನು ಪದದ ತನ್ನ ಉತ್ತರಾಧಿಕಾರಿಯಲ್ಲದ ಒಬ್ಬ ಪಕ್ಷಕಾರನಿಗೆ ವರ್ಗಾಯಿಸಿದಲ್ಲಿ, 3ನೇ ಪ್ರಕರಣದಲ್ಲಿ ಹೇಳಿರುವ ರೀತಿಯಲ್ಲಿ ಮತ್ತು ಷರತ್ತುಗಳಿಗೆ ಒಳಪಟ್ಟು ಆ ಪದದ ಧಾರಕನ ರುಜುವಿನ ಮೂಲಕ ಮತ್ತು ಆ ಪದದ ಹೆಸರಿನಲ್ಲಿ ಆ ವರ್ಗಾವಣೆಯನ್ನು ಮಾಡತಕ್ಕದ್ದು.

(4) ಈ ಪ್ರಕರಣವು ಒಬ್ಬನೇ ಧಾರಕನಿರುವಂಥ ಪದಕ್ಕೆ ಅನ್ವಯವಾಗುವಂತೆಯೇ ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಜಂಟಿ ಧಾರಕರಿರುವಂಥ ಪದಕ್ಕೂ ಸಹ ಅನ್ವಯವಾಗುತ್ತದೆ.

**6. ನ್ಯಾಸದ ನೋಟೀಸು ಸ್ವೀಕರಿಸಲು ಅರ್ಹವಲ್ಲ:–** (1) ಯಾವುದೇ ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಸದ ಯಾವುದೇ ನೋಟೀಸು ಸರ್ಕಾರವು ಸ್ವೀಕರಿಸಲು ಅರ್ಹವಾಗಿರತಕ್ಕದ್ದಲ್ಲ, ಇಲ್ಲವೇ ನೋಟೀಸನ್ನು ಸ್ಪಷ್ಟವಾಗಿ ನೀಡಿದ್ದರೂ ಸಹ ಸರ್ಕಾರವು ಯಾವುದೇ ಅಂಥ ನೋಟೀಸಿಗೆ ಬದ್ಧವಾಗಿರತಕ್ಕದ್ದಲ್ಲ, ಇಲ್ಲವೇ ಯಾವುದೇ ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಸರ್ಕಾರವನ್ನು ನ್ಯಾಸಧಾರಿಯಾಗಿ ಪರಿಗಣಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ಬ್ಯಾಂಕು, ಅನುಗ್ರಹ ತೋರಿ ಕೃತ್ಯವೆಂಬಂತೆ ಮತ್ತು ಬ್ಯಾಂಕಿಗೆ ಅಥವಾ ಸರ್ಕಾರಕ್ಕೆ ಯಾವುದೇ ಹೊಣೆಗಾರಿಕೆಯಿಲ್ಲದಂತೆ, ಸ್ಟಾಕಿನ ಮೇಲಿನ ಬಡ್ಡಿಯ ಅಥವಾ ಅದರ ವಾಯಿದೆ ತುಂಬಿದಾಗಿನ ಮೌಲ್ಯದ ಸಂದಾಯಕ್ಕಾಗಿ, ಅಥವಾ ಅದರ ವರ್ಗಾವಣೆಯ ಬಗ್ಗೆ ಅಥವಾ ಅದಕ್ಕೆ ಸಂಬಂಧಿಸಿದಂಥ ಇತರ ವಿಷಯಗಳ ಬಗ್ಗೆ ಸ್ಟಾಕಿನ ಧಾರಕನ ನಿರ್ದೇಶನಗಳನ್ನು ತಾನು ಸೂಕ್ತವೆಂದು ಬ್ಯಾಂಕು ಭಾವಿಸುವಂತೆ ತನ್ನ ಪುಸ್ತಕಗಳಲ್ಲಿ ದಾಖಲಿಸಬಹುದು.

**7. ಮೃತ ಏಕಮಾತ್ರ ಧಾರಕನ ಸರ್ಕಾರಿ ಭದ್ರತಾ ಪತ್ರದ ಸ್ವಾಮ್ಯವನ್ನು ಹೊಂದಿರುವ ವ್ಯಕ್ತಿಗಳನ್ನು ಬ್ಯಾಂಕು ಮಾನ್ಯಮಾಡಬಹುದು:–** 9ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಸರ್ಕಾರಿ ಭದ್ರತಾ ಪತ್ರದ ಮೃತ ಏಕಮಾತ್ರ ಧಾರಕನ ಕಾರ್ಯನಿರ್ವಾಹಕರನ್ನು ಮತ್ತು ಆಡಳಿತಗಾರರನ್ನು ಹಾಗೂ ಭಾರತ ಉತ್ತರಾಧಿಕಾರ ಅಧಿನಿಯಮ, 1925 (1925ರ 39)ರ ಭಾಗ x ರ ಅಡಿಯಲ್ಲಿ ಹೊರಡಿಸಲಾದ ಉತ್ತರಾಧಿಕಾರ ಪ್ರಮಾಣ ಪತ್ರದ ಧಾರಕನನ್ನು ಮಾತ್ರ ಬ್ಯಾಂಕು ಸರ್ಕಾರಿ ಭದ್ರತಾ ಪತ್ರದ ಯಾವುದೇ ಸ್ವಾಮ್ಯವನ್ನು ಹೊಂದಿರುವ ವ್ಯಕ್ತಿಗಳೆಂದು ಮಾನ್ಯಮಾಡತಕ್ಕದ್ದು:

ಪರಂತು, ಸರ್ಕಾರಿ ಭದ್ರತಾ ಪತ್ರವು ಕುಟುಂಬದ ಒಬ್ಬ ಮೃತ ಸದಸ್ಯನ ಹೆಸರಿನಲ್ಲಿರುವುದಾಗಿ ಬ್ಯಾಂಕಿಗೆ ತಿಳಿದುಬಂದಾಗ ಹಾಗೂ ಕುಟುಂಬದ ವ್ಯವಸ್ಥಾಪಕನು ಅಥವಾ ಏಕಮಾತ್ರ ಜೀವಂತ ಸದಸ್ಯನು ಅವನ ಸ್ವಾಮ್ಯವನ್ನು ಮಾನ್ಯ ಮಾಡುವುದಕ್ಕಾಗಿ ಅಂಥ ಪ್ರಾಧಿಕಾರವು ರುಜುಹಾಕಿದ ಪ್ರಮಾಣ ಪತ್ರದ ಸಮರ್ಥನೆಯೊಂದಿಗೆ ಒಂದು ಅರ್ಜಿಯನ್ನು ಸಲ್ಲಿಸಿದಾಗ ಮತ್ತು ಮೃತನು ಮಿತಾಕ್ಷರ ಕಾನೂನು ಅನ್ವಯವಾಗುವ ಹಿಂದೂ ಅವಿಭಕ್ತ ಕುಟುಂಬಕ್ಕೆ ಸೇರಿದ್ದಾನೆಂದು, ಆ ಸರ್ಕಾರಿ ಭದ್ರತಾ ಪತ್ರವು ಆ ಕುಟುಂಬದ ಜಂಟಿ ಸ್ವತ್ತಿನ ಭಾಗವಾಗಿದೆಯೆಂದು ಮತ್ತು ಆ ಅರ್ಜಿದಾರನು ಆ ಕುಟುಂಬದ ವ್ಯವಸ್ಥಾಪಕನಾಗಿದ್ದಾನೆಂದು ಅಥವಾ ಏಕಮಾತ್ರ ಜೀವಂತ ಸದಸ್ಯನಾಗಿದ್ದಾನೆಂದು ನಿಯಮಿಸಬಹುದಾದಂತೆ ವಿಚಾರಣೆಯನ್ನು ಮಾಡಿದ ತರುವಾಯ, ಮಿತಾಕ್ಷರ ಕಾನೂನು ಅನ್ವಯವಾಗುವ ಒಂದು ಹಿಂದೂ ಅವಿಭಕ್ತ ಕುಟುಂಬದ ವ್ಯವಸ್ಥಾಪಕನು ಅಥವಾ ಏಕಮಾತ್ರ ಜೀವಂತ ಸದಸ್ಯನು ಆ ಸರ್ಕಾರಿ ಭದ್ರತಾ ಪತ್ರದ ಸ್ವಾಮ್ಯವನ್ನು ಹೊಂದಿರುತ್ತಾನೆಂದು ಬ್ಯಾಂಕು ಅವನಿಗೆ ಮನ್ನಣೆ ನೀಡುವುದನ್ನು ಈ ಪ್ರಕರಣದಲ್ಲಿರುವುದು ಯಾವುದೂ ಪ್ರತಿಷೇಧಿಸತಕ್ಕದ್ದಲ್ಲ.

**ವಿವರಣೆ:–**"ಮಿತಾಕ್ಷರ ಕಾನೂನು ಅನ್ವಯವಾಗುವ ಹಿಂದೂ ಅವಿಭಕ್ತ ಕುಟುಂಬ" ಎಂಬ ಪದಾವಳಿಯು ಈ ಪ್ರಕರಣದ ಉದ್ದೇಶಗಳಿಗಾಗಿ "ಮಲಬಾರ್ ತರವಾಡ" ವನ್ನು ಒಳಗೊಳ್ಳುವುದೆಂದು ಭಾವಿಸತಕ್ಕದ್ದು.

**8. ಜಂಟಿ ಧಾರಕರಲ್ಲಿ ಅಥವಾ ಹಣ ಪಡೆಯುವ ಹಲವರಲ್ಲಿ ಬದುಕುಳಿದಿರುವವರ ಹಕ್ಕು:–**ಭಾರತ ಕರಾರು ಅಧಿನಿಯಮ, 1872ರ 45ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ,–

(ಎ) ಸರ್ಕಾರಿ ಭದ್ರತಾ ಪತ್ರವನ್ನು ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ವ್ಯಕ್ತಿಗಳು ಜಂಟಿಯಾಗಿ ಧಾರಣ ಮಾಡಿದ್ದು ಆ ಇಬ್ಬರಲ್ಲಿ ಯಾರಾದರೊಬ್ಬರು ಅಥವಾ ಅವರಲ್ಲಿ ಯಾರಾದರೂ ಮರಣ ಹೊಂದಿದಾಗ, ಆ ಭದ್ರತಾ ಪತ್ರದ ಸ್ವಾಮ್ಯವು ಆ ವ್ಯಕ್ತಿಗಳ ಪೈಕಿ ಬದುಕುಳಿದಿರುವ ವ್ಯಕ್ತಿಯಲ್ಲಿ ಅಥವಾ ವ್ಯಕ್ತಿಗಳಲ್ಲಿ ನಿಹಿತವಾಗತಕ್ಕದ್ದು; ಮತ್ತು

(ಬಿ) ಸರ್ಕಾರಿ ಭದ್ರತಾ ಪತ್ರದ ಹಣವನ್ನು ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳಿಗೆ ಪ್ರತ್ಯೇಕವಾಗಿ ಸಂದಾಯ ಮಾಡಬೇಕಾಗಿದ್ದು, ಆ ಇಬ್ಬರಲ್ಲಿ ಯಾರಾದರೊಬ್ಬರು ಅಥವಾ ಅವರಲ್ಲಿ ಯಾರಾದರೂ ಮರಣ ಹೊಂದಿದಾಗ ಆ ಭದ್ರತಾ ಪತ್ರದ ಹಣವನ್ನು, ಆ ವ್ಯಕ್ತಿಗಳ ಪೈಕಿ ಬದುಕುಳಿದಿರುವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಅಥವಾ ಮೃತನ ಪ್ರತಿನಿಧಿಗೆ ಅಥವಾ ಅವರಲ್ಲಿ ಯಾರಿಗಾದರೂ ಸಂದಾಯ ಮಾಡತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಈ ಪ್ರಕರಣವು ಅನ್ವಯವಾಗುವ ಯಾವುದೇ ಭದ್ರತಾ ಪತ್ರದ ಅಡಿಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಬದುಕುಳಿದಿರುವ ವ್ಯಕ್ತಿ ಅಥವಾ ವ್ಯಕ್ತಿಗಳ ವಿರುದ್ಧ ಮೃತ ವ್ಯಕ್ತಿಯ ಯಾರೇ ಪ್ರತಿನಿಧಿಯು ಹೊಂದಿರಬಹುದಾದಂಥ ಯಾವುದೇ ಕ್ಲೇಮಿಗೆ ಬಾಧೆಯನ್ನುಂಟುಮಾಡತಕ್ಕದ್ದಲ್ಲ.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ, ಕಂಪನಿಗಳ ಅಧಿನಿಯಮ, 1956 (1956ರ 1) ಅಥವಾ ಸಹಕಾರ ಸಂಘಗಳ ಅಧಿನಿಯಮ, 1912 (1912ರ 2)ರ ಮೇರೆಗೆ ಅಥವಾ ಭಾರತದೊಳಗಾಗಲಿ ಅಥವಾ ಹೊರಗಾಗಲಿ ವ್ಯಕ್ತಿಗಳ ಸಂಘಗಳ ನಿಗಮನಕ್ಕೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಅಧಿನಿಯಮಿತಿಯ ಮೇರೆಗೆ ನಿಗಮಿತವಾದ ಅಥವಾ ನಿಗಮಿತವಾಗಿದೆಯೆಂದು ಭಾವಿಸಲಾದ ನಿಕಾಯವು, ಅದು ವಿಘಟಿತವಾದಾಗ ಅಂತ್ಯಗೊಂಡಿದೆಯೆಂದು ಭಾವಿಸತಕ್ಕದ್ದು.

**9. ಐದು ಸಾವಿರ ರೂಪಾಯಿಗಳ ಮುಖ ಬೆಲೆಯನ್ನು ಮೀರದ ಸರ್ಕಾರಿ ಭದ್ರತಾ ಪತ್ರಗಳ ಧಾರಕನು ಮರಣ ಹೊಂದಿದ ಮೇಲೆ ಕ್ಷಿಪ್ರ ಪ್ರಕ್ರಿಯೆ:–** 7ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಒಟ್ಟು ಐದು ಸಾವಿರ ರೂಪಾಯಿಗಳನ್ನು ಮೀರದ ಮುಖಬೆಲೆಯ ಸರ್ಕಾರಿ ಭದ್ರತಾ ಪತ್ರದ ಅಥವಾ ಭದ್ರತಾ ಪತ್ರಗಳ ಧಾರಕನಾದ ವ್ಯಕ್ತಿಯು ಮರಣಹೊಂದಿದ ಆರು ತಿಂಗಳುಗಳೊಳಗೆ, ಅವನ ಸಂಪದದ ಬಗ್ಗೆ ಅವನ ಮರಣ ಶಾಸನದ ಪ್ರೊಬೇಟು ಅಥವಾ ಆಡಳಿತಾಧಿಕಾರ ಪತ್ರ ಅಥವಾ ಭಾರತ ಉತ್ತರಾಧಿಕಾರ ಅಧಿನಿಯಮ, 1925 (1925ರ 39)ರ xನೇ ಭಾಗದ ಮೇರೆಗೆ ನೀಡಲಾದ ಉತ್ತರಾಧಿಕಾರ ಪ್ರಮಾಣ ಪತ್ರವನ್ನು

ಬ್ಯಾಂಕಿಗೆ ಒದಗಿಸದಿದ್ದರೆ, ಅಥವಾ ಇವುಗಳಲ್ಲಿ ಒಂದನ್ನು ಪಡೆಯಲು ವ್ಯವಹರಣೆಗಳನ್ನು ಹೂಡಲಾಗಿದೆಯೆಂದು ಬ್ಯಾಂಕಿಗೆ ಮನದಟ್ಟಾಗುವಂತೆ ರುಜುವಾತನ್ನು ಒದಗಿಸದಿದ್ದರೆ, ಬ್ಯಾಂಕು, ಯಾವ ವ್ಯಕ್ತಿಯು ಆ ಭದ್ರತಾ ಪತ್ರಕ್ಕೆ ಅಥವಾ ಭದ್ರತಾ ಪತ್ರಗಳಿಗೆ ಅಥವಾ ಮೃತನ ಸಂಪದವನ್ನು ನಿರ್ವಹಿಸಲು ಹಕ್ಕುಳ್ಳವನಾಗಿರುವನೋ ಆ ವ್ಯಕ್ತಿಯ ಬಗ್ಗೆ ನಿರ್ಧರಿಸಬಹುದು ಮತ್ತು ಹಾಗೆ ನಿರ್ಧರಿಸಲಾದ ವ್ಯಕ್ತಿಯಲ್ಲಿ ಭದ್ರತಾ ಪತ್ರ ಅಥವಾ ಭದ್ರತಾ ಪತ್ರಗಳನ್ನು ನಿಹಿತಗೊಳಿಸಿದ ಆದೇಶವನ್ನು ಹೊರಡಿಸಬಹುದು.

**9ಎ. 9ಬಿ, 9ಸಿ ಇತ್ಯಾದಿ ಪ್ರಕರಣಗಳನ್ನು ಅನ್ವಯಿಸುವುದು:–** 1ಎ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, 9ಬಿ ಮತ್ತು 9ಸಿ ಪ್ರಕರಣಗಳ ಉಪಬಂಧಗಳು ಹಾಗೂ 9ಬಿ ಮತ್ತು 9ಸಿ ಪ್ರಕರಣಗಳಲ್ಲಿ ಉಲ್ಲೇಖಿಸಿದ ಯಾವುವೇ ವಿಷಯಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ಇರುವ ಅಧಿಕಾರವು, ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಸಾರ್ವಜನಿಕ ಋಣ (ತಿದ್ದುಪಡಿ) ಅಧಿನಿಯಮ, 1959 ಇದರ ಪ್ರಾರಂಭಕ್ಕೆ ಮುಂಚೆಯೇ ಆಗಲಿ ಅಥವಾ ತರುವಾಯವೇ ಆಗಲಿ, ಕೇಂದ್ರ ಸರ್ಕಾರವು ಸೃಜಿಸಿದ ಮತ್ತು ಹೊರಡಿಸಿದ ಸರ್ಕಾರಿ ಭದ್ರತಾ ಪತ್ರಗಳ ವರ್ಗಗಳಿಗೆ ಮಾತ್ರವೇ ಅನ್ವಯವಾಗತಕ್ಕದ್ದು ಮತ್ತು ಅಂಥ ಭದ್ರತಾ ಪತ್ರಗಳ ವರ್ಗಗಳಿಗೆ ಸಂಬಂಧಿಸಿದಂತೆ 7 ಮತ್ತು 9ನೇ ಪ್ರಕರಣಗಳ ಉಪಬಂಧಗಳು, 9ಬಿ ಮತ್ತು 9ಸಿ ಪ್ರಕರಣಗಳಲ್ಲಿ ಒಳಗೊಂಡಿರುವ ಉಪಬಂಧಗಳಿಗೊಳಪಟ್ಟು ಪರಿಣಾಮಕಾರಿಯಾಗಿರತಕ್ಕದ್ದು.

**9ಬಿ. ಸರ್ಕಾರಿ ಭದ್ರತಾ ಪತ್ರಗಳ ಧಾರಕರು ಮಾಡಿದ ನಾಮನಿರ್ದೇಶನಗಳು:–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಮರಣ ಶಾಸನ ಪತ್ರವೇ ಆಗಿರಲಿ ಅಥವಾ ಅನ್ಯಥಾ ಆಗಿರಲಿ, ಅದರ ಯಾವುದೇ ವಿಲೇವಾರಿಯಲ್ಲಿ ಏನೇ ಒಳಗೊಂಡಿದ್ದರೂ, ನಿಯಮಿಸಿದ ರೀತಿಯಲ್ಲಿ ಮಾಡಿದ ನಾಮನಿರ್ದೇಶನವು, ಆ ಭದ್ರತಾ ಪತ್ರದ ಧಾರಕನು ಮರಣ ಹೊಂದಿದ ನಂತರ ಭದ್ರತಾ ಪತ್ರದ ಮೇಲೆ ತತ್ಕಾಲದಲ್ಲಿ ಬರಬೇಕಾದ ಮೊಬಲಗಿನ ಸಂದಾಯವನ್ನು ಸ್ವೀಕರಿಸುವ ಹಕ್ಕನ್ನು ಯಾರೇ ವ್ಯಕ್ತಿಗೆ ನೀಡಿರುವುದಾಗಿ ತಾತ್ಪರ್ಯವಾಗುವಲ್ಲಿ, ಆ ನಾಮನಿರ್ದೇಶಿತನು ಭದ್ರತಾ ಪತ್ರದ ಧಾರಕನ ಮರಣದ ತರುವಾಯ ನಿಯಮಿಸಲಾದ ರೀತಿಯಲ್ಲಿ ಆ ನಾಮನಿರ್ದೇಶನವನ್ನು ಮಾರ್ಪಾಡುಗೊಳಿಸಿದ ಅಥವಾ ರದ್ದುಪಡಿಸಿದ ಹೊರತು ಎಲ್ಲ ಇತರ ವ್ಯಕ್ತಿಗಳನ್ನು ಹೊರತುಪಡಿಸಿ, ಆ ಭದ್ರತಾ ಪತ್ರಕ್ಕೆ ಮತ್ತು ಅದರ ಮೇಲಿನ ಸಂದಾಯಕ್ಕೆ ಹಕ್ಕುಳ್ಳವನಾಗತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ನಾಮನಿರ್ದೇಶನವು, ನಾಮನಿರ್ದೇಶನವನ್ನು ಮಾಡುವ ಭದ್ರತಾ ಪತ್ರದ ಧಾರಕನಿಗಿಂತ ಮೊದಲೇ ನಾಮನಿರ್ದೇಶಿತನು ಮೃತನಾದರೆ, ಅಥವಾ ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ನಾಮನಿರ್ದೇಶಿತರು ಇರುವಲ್ಲಿ, ಆ ಎಲ್ಲಾ ನಾಮನಿರ್ದೇಶಿತರು ಮೊದಲೇ ಮೃತಪಟ್ಟರೆ ಶೂನ್ಯವಾಗತಕ್ಕದ್ದು.

(3) ನಿಯಮಿಸಿದ ರೀತಿಯಲ್ಲಿ ಮಾಡಿದ ಸರ್ಕಾರಿ ಭದ್ರತಾ ಪತ್ರದ ವರ್ಗಾವಣೆಯು ಈ ಹಿಂದೆ ಮಾಡಲಾದ ನಾಮನಿರ್ದೇಶನವನ್ನು ತನ್ನಷ್ಟಕ್ಕೇ ತಾನೇ ರದ್ದುಪಡಿಸುತ್ತದೆ;

ಪರಂತು, ಸರ್ಕಾರಿ ಭದ್ರತಾ ಪತ್ರವನ್ನು ಯಾರೇ ವ್ಯಕ್ತಿಯು ಅಥವಾ ಯಾರೇ ವ್ಯಕ್ತಿಯ ಪರವಾಗಿ ಒತ್ತೆದಾರನಾಗಿ ಅಥವಾ ಯಾವುದೇ ಉದ್ದೇಶಕ್ಕಾಗಿ ಭದ್ರತೆಯ ರೂಪದಲ್ಲಿ ಹೊಂದಿರುವಲ್ಲಿ, ಹಾಗೆ ಹೊಂದಿರುವುದು ನಾಮನಿರ್ದೇಶನವನ್ನು ರದ್ದುಗೊಳಿಸುವ ಪರಿಣಾಮ ಹೊಂದಿರತಕ್ಕದ್ದಲ್ಲ. ಆದರೆ ನಾಮನಿರ್ದೇಶಿತನ ಹಕ್ಕು ಹಾಗೆ ಅದನ್ನು ಹೊಂದಿರುವ ವ್ಯಕ್ತಿಯ ಹಕ್ಕಿಗೆ ಒಳಪಟ್ಟಿರತಕ್ಕದ್ದು.

(4) ನಾಮನಿರ್ದೇಶಿತನು ಅಪ್ರಾಪ್ತ ವಯಸ್ಕನಾಗಿರುವಲ್ಲಿ, ನಾಮನಿರ್ದೇಶಿತನು ಅಪ್ರಾಪ್ತ ವಯಸ್ಕನಾಗಿರುವ ಕಾಲದಲ್ಲಿ ಅವನು ಮರಣಹೊಂದಿದ ಸಂದರ್ಭದಲ್ಲಿ ಭದ್ರತಾ ಪತ್ರದ ಮೇಲೆ ತತ್ಕಾಲದಲ್ಲಿ ಬರಬೇಕಾದ ಮೊಬಲಗನ್ನು ಸ್ವೀಕರಿಸಲು ನಿಯಮಿಸಲಾದ ರೀತಿಯಲ್ಲಿ ಯಾರೇ ವ್ಯಕ್ತಿಯನ್ನು ನೇಮಕ ಮಾಡುವುದು ಭದ್ರತಾ ಪತ್ರದ ಧಾರಕನಿಗೆ ಕಾನೂನುಬದ್ಧವಾಗಿರತಕ್ಕದ್ದು ಮತ್ತು ಯಾವುದೇ ಅಂಥ ನೇಮಕವನ್ನು ಮಾಡಿರುವಲ್ಲಿ, ಸರ್ಕಾರಿ ಭದ್ರತಾ ಪತ್ರವು, ಧಾರಕನು ಮರಣಹೊಂದಿದ ತರುವಾಯ ಮತ್ತು ನಾಮನಿರ್ದೇಶಿತನು ಅಪ್ರಾಪ್ತ ವಯಸ್ಕನಾಗಿರುವ ಕಾಲದಲ್ಲಿ, ಅಪ್ರಾಪ್ತ ವಯಸ್ಕನನ್ನು ಪ್ರತಿನಿಧಿಸುವ ಆ ವ್ಯಕ್ತಿಯಲ್ಲಿ ನಿಹಿತವಾಗಿದೆಯೆಂದು ಭಾವಿಸತಕ್ಕದ್ದು.

**9ಸಿ. ಧಾರಕನು ಮರಣಹೊಂದಿದ ಮೇಲೆ ಸಂದಾಯ:–** (1) ವ್ಯಕ್ತಿಯು ಮರಣ ಹೊಂದಿದರೆ ಮತ್ತು ಅವನು ಮರಣ ಹೊಂದಿದ ಕಾಲದಲ್ಲಿ ಅವನು ಸರ್ಕಾರಿ ಭದ್ರತಾ ಪತ್ರದ ಧಾರಕನಾಗಿದ್ದರೆ, ಹಾಗೂ ಅವನು ಮರಣ ಹೊಂದಿದ ಕಾಲದಲ್ಲಿ ಯಾರೇ ವ್ಯಕ್ತಿಯ ಪರವಾಗಿ ಮಾಡಿದ ನಾಮನಿರ್ದೇಶನವು ಜಾರಿಯಲ್ಲಿದ್ದರೆ, ಆ ಭದ್ರತಾ ಪತ್ರದ ಮೇಲೆ ತತ್ಕಾಲದಲ್ಲಿ ಬರಬೇಕಾದ ಮೊಬಲಗನ್ನು ನಾಮನಿರ್ದೇಶಿತನಿಗೆ ಸಂದಾಯ ಮಾಡತಕ್ಕದ್ದು.

(2) ನಾಮನಿರ್ದೇಶಿತನು ಅಪ್ರಾಪ್ತ ವಯಸ್ಕನಾಗಿದ್ದಲ್ಲಿ, ಆ ಸರ್ಕಾರಿ ಭದ್ರತಾ ಪತ್ರದ ಮೇಲೆ ತತ್ಕಾಲದಲ್ಲಿ ಬರಬೇಕಾದ ಮೊಬಲಗನ್ನು,–

(ಎ) 9ಬಿ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಅದನ್ನು ಸ್ವೀಕರಿಸಲು ಒಬ್ಬ ವ್ಯಕ್ತಿಯನ್ನು ನೇಮಕ ಮಾಡಿರುವ ಯಾವುದೇ ಸಂದರ್ಭದಲ್ಲಿ, ಆ ವ್ಯಕ್ತಿಗೆ; ಮತ್ತು

(ಬಿ) ಅಂಥ ಯಾರೇ ವ್ಯಕ್ತಿಯು ಇಲ್ಲದಿರುವಲ್ಲಿ, ಅಪ್ರಾಪ್ತ ವಯಸ್ಕನ ಉಪಯೋಗಕ್ಕಾಗಿ ಆ ಅಪ್ರಾಪ್ತ ವಯಸ್ಕನ ಪೋಷಕನಿಗೆ,

– ಸಂದಾಯ ಮಾಡತಕ್ಕದ್ದು.

(3) ಸರ್ಕಾರಿ ಭದ್ರತಾ ಪತ್ರದ ಮೇಲೆ ತತ್ಕಾಲದಲ್ಲಿ ಬರಬೇಕಾದ ಮೊಬಲಗನ್ನು ಇಬ್ಬರು ಅಥವಾ ಹೆಚ್ಚು ನಾಮನಿರ್ದೇಶಿತರಿಗೆ ಸಂದಾಯ ಮಾಡಬೇಕಾಗಿರುವಲ್ಲಿ ಮತ್ತು ಆ ಇಬ್ಬರಲ್ಲೊಬ್ಬರು ಅಥವಾ ಅವರಲ್ಲಿ ಯಾರಾದರೊಬ್ಬರು ಮರಣ

ಹೊಂದಿದಲ್ಲಿ, ಭದ್ರತಾ ಪತ್ರದ ಸ್ವಾಮ್ಯವು ಆ ನಾಮನಿರ್ದೇಶಿತರ ಪೈಕಿ ಬದುಕುಳಿದಿರುವವನಲ್ಲಿ ಅಥವಾ ಬದುಕುಳಿದಿರುವವರಲ್ಲಿ ನಿಹಿತವಾಗತಕ್ಕದ್ದು ಹಾಗೂ ಅದರ ಮೇಲೆ ತತ್ಕಾಲದಲ್ಲಿ ಬರಬೇಕಾದ ಮೊಬಲಗನ್ನು ತದನುಸಾರವಾಗಿ ಸಂದಾಯ ಮಾಡತಕ್ಕದ್ದು.

(4) ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಭದ್ರತಾ ಪತ್ರದ ಅವಧಿ ತುಂಬುವ ಮುಂಚೆ ಅಥವಾ ಭದ್ರತಾ ಪತ್ರದ ನಿಬಂಧನೆಗಳಿಗನುಸಾರವಾಗಿಯಲ್ಲದೆ ಅನ್ಯಥಾ, ಅದರ ಮೇಲೆ ಬರಬೇಕಾದ ಮೊಬಲಗಿನ ಸಂದಾಯವನ್ನು ಅಂಗೀಕರಿಸಲು ಯಾರೇ ವ್ಯಕ್ತಿಯನ್ನು ಅಗತ್ಯಪಡಿಸುವುದೆಂದು ಭಾವಿಸತಕ್ಕದ್ದಲ್ಲ.

(5) ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ, ಸರ್ಕಾರಿ ಭದ್ರತಾ ಪತ್ರದ ಮೇಲೆ ತತ್ಕಾಲದಲ್ಲಿ ಬರಬೇಕಾದ ಮೊಬಲಗಿನ ಯಾವುದೇ ಸಂದಾಯವು ಆ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಪೂರ್ಣ ತೀರಿಕೆಯಾಗಿರತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಅಥವಾ 9ಬಿ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಈ ಪ್ರಕರಣದ ಮೇರೆಗೆ ಯಾವುದೇ ಸಂದಾಯವನ್ನು ಯಾವ ವ್ಯಕ್ತಿಗೆ ಮಾಡಲಾಗಿದೆಯೋ ಆ ವ್ಯಕ್ತಿಯ ವಿರುದ್ಧ ಯಾರೇ ವ್ಯಕ್ತಿಯು ಹೊಂದಿರಬಹುದಾದ ಯಾವುದೇ ಹಕ್ಕಿಗೆ ಅಥವಾ ಕ್ಲೇಮಿಗೆ ಬಾಧೆಯುಂಟು ಮಾಡತಕ್ಕದ್ದಲ್ಲ.

**10. ಅಪ್ರಾಪ್ತ ವಯಸ್ಕನಿಗೆ ಅಥವಾ ಮನೋವಿಕಲ ವ್ಯಕ್ತಿಗೆ ಸೇರಿದ ಐದು ಸಾವಿರ ರೂಪಾಯಿಗಳ ಮುಖಬೆಲೆಯನ್ನು ಮೀರದ ಸರ್ಕಾರಿ ಭದ್ರತಾ ಪತ್ರಗಳು:–** ಸರ್ಕಾರಿ ಭದ್ರತಾ ಪತ್ರವು ಅಥವಾ ಭದ್ರತಾ ಪತ್ರಗಳು ಅಪ್ರಾಪ್ತ ವಯಸ್ಕನಿಗೆ ಅಥವಾ ಮನೋವಿಕಲನಾಗಿರುವ ಮತ್ತು ತನ್ನ ವ್ಯವಹಾರಗಳನ್ನು ನಿರ್ವಹಿಸಲು ಅಸಮರ್ಥನಾಗಿರುವ ವ್ಯಕ್ತಿಗೆ ಸೇರಿರುವಾಗ ಮತ್ತು ಆ ಭದ್ರತಾ ಪತ್ರದ ಅಥವಾ ಭದ್ರತಾ ಪತ್ರಗಳ ಮುಖಬೆಲೆಯು ಒಟ್ಟು ಐದುಸಾವಿರ ರೂಪಾಯಿಗಳನ್ನು ಮೀರದಿರುವಾಗ, ಬ್ಯಾಂಕು, ಅಂಥ ಭದ್ರತಾ ಪತ್ರವನ್ನು ಅಥವಾ ಭದ್ರತಾ ಪತ್ರಗಳನ್ನು ಅಪ್ರಾಪ್ತ ವಯಸ್ಕನನ್ನು ಅಥವಾ ಮನೋವಿಕಲ ವ್ಯಕ್ತಿಯನ್ನು ಪ್ರತಿನಿಧಿಸುವನೆಂದು ತಾನು ಪರಿಗಣಿಸುವಂಥ ವ್ಯಕ್ತಿಯಲ್ಲಿ ನಿಹಿತಗೊಳಿಸಲು ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡಬಹುದು.

**11. ಪರಿವರ್ತನೆ, ಕ್ರೋಢೀಕರಣ, ಉಪವಿಭಜನೆ ಅಥವಾ ನವೀಕರಣದ ಮೇಲೆ ಭದ್ರತಾ ಪತ್ರಗಳ ದ್ವಿಪ್ರತಿಯನ್ನು ಮತ್ತು ಹೊಸ ಭದ್ರತಾ ಪತ್ರಗಳನ್ನು ನೀಡುವುದು:–** (1) ಸರ್ಕಾರಿ ಭದ್ರತಾ ಪತ್ರಕ್ಕೆ ಹಕ್ಕುಳ್ಳ ವ್ಯಕ್ತಿಯು, ಭದ್ರತಾ ಪತ್ರವು ಕಳೆದುಹೋಗಿದೆ, ಕಳುವಾಗಿದೆ ಅಥವಾ ನಾಶವಾಗಿದೆ ಅಥವಾ ವಿರೂಪಗೊಂಡಿದೆ ಅಥವಾ ಹಾಳಾಗಿದೆಯೆಂದು ಹೇಳಿ ಬ್ಯಾಂಕಿಗೆ ಅರ್ಜಿಯನ್ನು ಸಲ್ಲಿಸಿದರೆ, ಬ್ಯಾಂಕು, ಭದ್ರತಾ ಪತ್ರವು ಕಳೆದು ಹೋಗಿರುವ, ಕಳುವಾಗಿರುವ, ನಾಶವಾಗಿರುವ, ವಿರೂಪಗೊಂಡಿರುವ ಅಥವಾ ಹಾಳಾಗಿರುವ ಬಗ್ಗೆ ತನಗೆ ಮನದಟ್ಟಾಗುವಂಥ ರುಜುವಾತನ್ನು ಪಡೆದ ಮೇಲೆ, ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಮತ್ತು ಅಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಅರ್ಜಿದಾರನಿಗೆ ಸಂದಾಯವಾಗುವಂತೆ ಭದ್ರತಾ ಪತ್ರದ ದ್ವಿಪ್ರತಿಯನ್ನು ನೀಡಲು ಆದೇಶಿಸಬಹುದು.

(2) ಸರ್ಕಾರಿ ಭದ್ರತಾ ಪತ್ರಕ್ಕೆ ಹಕ್ಕುಳ್ಳ ವ್ಯಕ್ತಿಯು ಭದ್ರತಾ ಪತ್ರವನ್ನು ಬೇರೊಂದು ಪ್ರಕಾರದ ಭದ್ರತಾ ಪತ್ರವನ್ನಾಗಿ ಪರಿವರ್ತಿಸಿಕೊಳ್ಳಲು ಅಥವಾ ಬೇರೊಂದು ಸಾಲದ ಸಂಬಂಧದಲ್ಲಿ ನೀಡಿದ ಭದ್ರತಾ ಪತ್ರವನ್ನಾಗಿ ಪರಿವರ್ತಿಸಿಕೊಳ್ಳಲು ಅಥವಾ ಅದನ್ನು ಇತರ ಅಂಥದೇ ಭದ್ರತಾ ಪತ್ರಗಳೊಂದಿಗೆ ಕ್ರೋಢೀಕರಿಸಿಕೊಳ್ಳಲು ಅಥವಾ ಅದನ್ನು ಉಪವಿಭಜಿಸಿಕೊಳ್ಳಲು ಅಥವಾ ಅದನ್ನು ನವೀಕರಿಸಿಕೊಳ್ಳಲು ಕೋರಿ ಬ್ಯಾಂಕಿಗೆ ಅರ್ಜಿ ಸಲ್ಲಿಸಿದರೆ, ಬ್ಯಾಂಕು, ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಮತ್ತು ಅಂಥ ಫೀಜುಗಳನ್ನು ಸಂದಾಯ ಮಾಡಿದ ಮೇಲೆ ಭದ್ರತಾ ಪತ್ರವನ್ನು ರದ್ದುಪಡಿಸಬಹುದು ಮತ್ತು ಹೊಸ ಭದ್ರತಾ ಪತ್ರವನ್ನು ಅಥವಾ ಭದ್ರತಾ ಪತ್ರಗಳನ್ನು ನೀಡಲು ಆದೇಶಿಸಬಹುದು.

(3) ಈ ಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ಭದ್ರತಾ ಪತ್ರದ ದ್ವಿಪ್ರತಿಯನ್ನು ಅಥವಾ ಹೊಸ ಭದ್ರತಾ ಪತ್ರವನ್ನು ಕೊಡಲಾಗಿದೆಯೋ, ಆ ವ್ಯಕ್ತಿಯು 19ನೇ ಪ್ರಕರಣದ ಉದ್ದೇಶಗಳಿಗಾಗಿ ಬ್ಯಾಂಕಿನಿಂದ ಆ ಭದ್ರತಾ ಪತ್ರದ ಧಾರಕನೆಂದು ಮಾನ್ಯ ಮಾಡಲ್ಪಟ್ಟಿದ್ದಾನೆಂದು ಭಾವಿಸತಕ್ಕದ್ದು; ಮತ್ತು ಯಾರೇ ವ್ಯಕ್ತಿಗೆ ಹಾಗೆ ನೀಡಲಾದ ಭದ್ರತಾ ಪತ್ರದ ದ್ವಿಪ್ರತಿಯು ಅಥವಾ ಹೊಸ ಭದ್ರತಾ ಪತ್ರವು ಸರ್ಕಾರದ ಮತ್ತು ಅಂಥ ವ್ಯಕ್ತಿಯ ಹಾಗೂ ಅವನ ಮೂಲಕ ಆ ತರುವಾಯ ಸ್ವಾಮ್ಯವನ್ನು ಪಡೆಯುವ ಎಲ್ಲಾ ವ್ಯಕ್ತಿಗಳ ನಡುವೆ ಹೊಸ ಕರಾರು ಆಗಿದೆಯೆಂದು ಭಾವಿಸತಕ್ಕದ್ದು.

**12. ಸರ್ಕಾರಿ ಭದ್ರತಾ ಪತ್ರದ ಸ್ವಾಮ್ಯದ ಬಗ್ಗೆ ವಿವಾದವಿರುವ ಸಂದರ್ಭದಲ್ಲಿ, ಅದನ್ನು ಬ್ಯಾಂಕು ಕ್ಷಿಪ್ರವಾಗಿ ನಿರ್ಧರಿಸುವುದು:–** (1) ಸರ್ಕಾರಿ ಭದ್ರತಾ ಪತ್ರದ ಸ್ವಾಮ್ಯದ ಬಗ್ಗೆ ಸಂದೇಹವಿದೆಯೆಂದು ಬ್ಯಾಂಕು ಅಭಿಪ್ರಾಯಪಟ್ಟರೆ, ಅದು, ಬ್ಯಾಂಕಿನ ಉದ್ದೇಶಗಳಿಗಾಗಿ ಆ ಭದ್ರತಾ ಪತ್ರಕ್ಕೆ ಯಾವ ವ್ಯಕ್ತಿಯು ಹಕ್ಕುಳ್ಳವನಾಗಿದ್ದಾನೆಂದು ಬ್ಯಾಂಕು ಭಾವಿಸುವುದೋ ಆ ವ್ಯಕ್ತಿಯನ್ನು ನಿರ್ಧರಿಸಲು ಅದು ಕ್ರಮಕೈಗೊಳ್ಳಬಹುದು.

(2) ಬ್ಯಾಂಕು ತನಗೆ ತಿಳಿದಿರುವ ಪ್ರತಿಯೊಬ್ಬ ಕ್ಲೇಮುದಾರನಿಗೆ ಎಲ್ಲಾ ಇತರ ಕ್ಲೇಮುದಾರರ ಹೆಸರುಗಳನ್ನು ಮತ್ತು ಯಾವಾಗ ಮತ್ತು ಬ್ಯಾಂಕಿನ ಯಾವ ಅಧಿಕಾರಿ ಬ್ಯಾಂಕಿನ ನಿರ್ಧಾರವನ್ನು ಕೈಗೊಳ್ಳುತ್ತಾರೆ ಎಂಬುದನ್ನು ತಿಳಿಸಿ ಲಿಖಿತ ನೋಟೀಸನ್ನು ನೀಡತಕ್ಕದ್ದು.

(3) ಬ್ಯಾಂಕು, ಹಾಗೆ ಕೈಗೊಂಡ ನಿರ್ಧಾರದ ಫಲಿತಾಂಶವನ್ನು ತಿಳಿಸಿ ಪ್ರತಿಯೊಬ್ಬ ಕ್ಲೇಮುದಾರನಿಗೆ ಲಿಖಿತ ನೋಟೀಸು ನೀಡತಕ್ಕದ್ದು.

(4) 3ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನೋಟೀಸುಗಳನ್ನು ನೀಡಿದಾಗಿನಿಂದ ಆರು ತಿಂಗಳು ಮುಕ್ತಾಯವಾದ ಮೇಲೆ, ಬ್ಯಾಂಕು, ಭದ್ರತಾ ಪತ್ರವನ್ನು ಮತ್ತು ಅದರ ಮೇಲೆ ಸಂದಾಯ ಮಾಡಿರದ ಯಾವುದೇ ಬಡ್ಡಿಯನ್ನು, ಆ ಭದ್ರತಾ ಪತ್ರಕ್ಕೆ ಹಕ್ಕುಳ್ಳವನೆಂದು ಬ್ಯಾಂಕಿಗೆ ತಿಳಿದುಬಂದ ವ್ಯಕ್ತಿಯಲ್ಲಿ ನಿಹಿತಗೊಳಿಸಿ ಆದೇಶವನ್ನು ಮಾಡಬಹುದು.

**13. ಸರ್ಕಾರಿ ಭದ್ರತಾ ಪತ್ರಗಳಿಗೆ ಸಂಬಂಧಿಸಿದಂತೆ ಅನ್ವಯವಾಗುವ ಕಾನೂನು:–** ಸರ್ಕಾರವು, ಅನುಕೂಲತೆಯ ದೃಷ್ಟಿಯಿಂದ ಸರ್ಕಾರಿ ಭದ್ರತಾ ಪತ್ರದ ಮೇಲೆ ಭಾರತದಲ್ಲಲ್ಲದೆ, ಬೇರೆಲ್ಲಾದರೂ ಸಂದಾಯ ಮಾಡಲು ಏನೇ ಏರ್ಪಾಡು ಮಾಡಿದ್ದರೂ, ಸರ್ಕಾರಿ ಭದ್ರತಾ ಪತ್ರಗಳಿಗೆ ಸಂಬಂಧಿಸಿದ ಎಲ್ಲಾ ವ್ಯಕ್ತಿಗಳ ಹಕ್ಕುಗಳನ್ನು, ಈ ಅಧಿನಿಯಮದ ಅಡಿಯಲ್ಲಿ ಕಾನೂನಿನ ಮೂಲಕ ಮತ್ತು ಭಾರತದ ನ್ಯಾಯಾಲಯಗಳಲ್ಲಿ ವ್ಯವಹರಿಸಲಾದಂತೆ ಅಂಥ ಎಲ್ಲಾ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ನಿರ್ಧರಿಸತಕ್ಕದ್ದು.

**14. ಸಾಕ್ಷ್ಯವನ್ನು ದಾಖಲಿಸುವುದು:–** (1) ಈ ಅಧಿನಿಯಮದ ಮೇರೆಗೆ ಯಾವ ಆದೇಶವನ್ನು ಮಾಡಲು ಬ್ಯಾಂಕು ಅಧಿಕಾರ ಹೊಂದಿದೆಯೋ ಆ ಯಾವುದೇ ಆದೇಶವನ್ನು ಮಾಡುವ ಉದ್ದೇಶಕ್ಕಾಗಿ ಆ ಬ್ಯಾಂಕು ಯಾವ ವ್ಯಕ್ತಿಯ ಸಾಕ್ಷ್ಯವನ್ನು ಹಾಜರುಪಡಿಸುವಂತೆ ಅಗತ್ಯಪಡಿಸುವುದೋ ಆ ಯಾರೇ ವ್ಯಕ್ತಿಯು ಹಾಜರುಪಡಿಸಬಹುದಾದಂಥ ಪೂರ್ಣ ಸಾಕ್ಷ್ಯವನ್ನು ಅಥವಾ ಅದರ ಯಾವುದೇ ಭಾಗವನ್ನು ದಾಖಲಿಸಲು ಅಥವಾ ದಾಖಲಿಸಿಕೊಳ್ಳಲು ಬ್ಯಾಂಕು ಜಿಲ್ಲಾ ಮ್ಯಾಜಿಸ್ಟ್ರೇಟನನ್ನು ಕೋರಬಹುದು. ಹಾಗೆ ಕೋರಲ್ಪಟ್ಟ ಜಿಲ್ಲಾ ಮ್ಯಾಜಿಸ್ಟ್ರೇಟನು ಸ್ವತಃ ತಾನೇ ದಾಖಲಿಸಿಕೊಳ್ಳಬಹುದು ಅಥವಾ ತನಗೆ ಅಧೀನನಾಗಿರುವ ಮತ್ತು ಸಾಕ್ಷ್ಯವನ್ನು ದಾಖಲಿಸಲು ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಬಗ್ಗೆ ಅಧಿಕಾರ ಪಡೆದಿರುವ ಯಾರೇ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನಿಗೆ ಅಥವಾ ತನಗೆ ಅಧೀನನಾಗಿರುವ ಯಾರೇ ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟನಿಗೆ ನಿರ್ದೇಶಿಸಬಹುದು ಮತ್ತು ಅವನು ಅದರ ಒಂದು ಪ್ರತಿಯನ್ನು ಬ್ಯಾಂಕಿಗೆ ಕಳುಹಿಸತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ನಿಹಿತಗೊಳಿಸುವ ಆದೇಶವನ್ನು ಮಾಡುವ ಉದ್ದೇಶಕ್ಕಾಗಿ, ಬ್ಯಾಂಕು ಯಾವ ವ್ಯಕ್ತಿಯ ಸಾಕ್ಷ್ಯವನ್ನು ಅಗತ್ಯಪಡಿಸುವುದೋ, ಆ ಯಾರೇ ವ್ಯಕ್ತಿಯ ಸಾಕ್ಷ್ಯವನ್ನು ದಾಖಲಿಸಲು ತನ್ನ ಅಧಿಕಾರಿಗಳಲ್ಲಿ ಒಬ್ಬರಿಗೆ ನಿರ್ದೇಶಿಸಬಹುದು ಅಥವಾ ಅಫಿಡಾವಿಟ್ಟಿನ ಮೇಲೆ ಸಾಕ್ಷ್ಯವನ್ನು ಸ್ವೀಕರಿಸಬಹುದು.

(3) ಈ ಪ್ರಕರಣಕ್ಕನುಸಾರವಾಗಿ ಕಾರ್ಯನಿರ್ವಹಿಸುವ ಒಬ್ಬ ಮ್ಯಾಜಿಸ್ಟ್ರೇಟನು ಅಥವಾ ಬ್ಯಾಂಕಿನ ಅಧಿಕಾರಿಯು ತಾನು ವಿಚಾರಣೆಗೊಳಪಡಿಸಿದ ಯಾರೇ ಸಾಕ್ಷಿದಾರನಿಗೆ ಪ್ರಮಾಣವನ್ನು ಮಾಡಿಸಬಹುದು.

**15. ನಿಹಿತಗೊಳಿಸುವ ಆದೇಶವನ್ನು ಮಾಡುವವರೆಗೆ ಸಂದಾಯಗಳನ್ನು ಮತ್ತು ವರ್ಗಾವಣೆಗಳ ನೋಂದಣಿಯನ್ನು ಮುಂದೂಡುವುದು:–** ಸರ್ಕಾರಿ ಭದ್ರತಾ ಪತ್ರವನ್ನು ಯಾರೇ ವ್ಯಕ್ತಿಯಲ್ಲಿ ನಿಹಿತಗೊಳಿಸುವ ಸಲುವಾಗಿ ಈ ಅಧಿನಿಯಮದ ಮೇರೆಗೆ ಆದೇಶವನ್ನು ಮಾಡಲು ಬ್ಯಾಂಕು ಉದ್ದೇಶಿಸಿದಲ್ಲಿ, ಬ್ಯಾಂಕು ನಿಹಿತ ಆದೇಶವನ್ನು ಮಾಡುವವರೆಗೂ ಭದ್ರತಾ ಪತ್ರದ ಮೇಲಿನ ಬಡ್ಡಿಯನ್ನು ಅಥವಾ ಭದ್ರತಾ ಪತ್ರದ ವಾಯಿದೆ ತುಂಬಿದಾಗಿನ ಮೌಲ್ಯದ ಸಂದಾಯವನ್ನು ತಡೆಹಿಡಿಯಬಹುದು ಅಥವಾ 11ನೇ ಪ್ರಕರಣದ ಮೇರೆಗೆ ಯಾವುದೇ ಆದೇಶ ಮಾಡುವುದನ್ನು ಅಥವಾ ಭದ್ರತಾ ಪತ್ರದ ಯಾವುದೇ ವರ್ಗಾವಣೆಯ ನೋಂದಣಿಯನ್ನು ಮುಂದೂಡಬಹುದು.

**16. ಬಂಧಪತ್ರಗಳನ್ನು ಅಗತ್ಯಪಡಿಸಲು ಬ್ಯಾಂಕಿನ ಅಧಿಕಾರ:–** (1) ಈ ಅಧಿನಿಯಮದ ಮೇರೆಗೆ ಮಾಡಲು ಅಧಿಕಾರ ನೀಡಿದ ಯಾವುದೇ ಆದೇಶವನ್ನು ಮಾಡುವುದಕ್ಕೆ ಮುಂಚೆ, ಬ್ಯಾಂಕು, ಯಾರ ಪರವಾಗಿ ಆದೇಶ ಮಾಡಲಾಗುವುದೋ ಆ ವ್ಯಕ್ತಿಯನ್ನು, (2)ನೇ ಉಪಪ್ರಕರಣದ ಮುಂದುವರಿಕೆಯಲ್ಲಿ, ಅದರ ಮೊಬಲಗನ್ನು ಬ್ಯಾಂಕಿಗೆ ಅಥವಾ ಯಾರಿಗೆ ಬ್ಯಾಂಕು ಆ ಬಂಧಪತ್ರವನ್ನು ಅಥವಾ ಭದ್ರತಾ ಪತ್ರವನ್ನು ಹಸ್ತಾಂತರಿಸಬಹುದೋ ಆ ಯಾರೇ ವ್ಯಕ್ತಿಗೆ ಸಂದಾಯ ಮಾಡಲು ಬ್ಯಾಂಕಿನ ವಶದಲ್ಲಿ ಇಟ್ಟುಕೊಳ್ಳುವಂಥ, ನಿಯಮಿಸಬಹುದಾದಂಥ ನಮೂನೆಯಲ್ಲಿ ಒಬ್ಬರು ಅಥವಾ ಹೆಚ್ಚು ಜಾಮೀನುದಾರರೊಂದಿಗೆ ಬಂಧಪತ್ರವನ್ನು ಬರೆದುಕೊಡಲು ಅಥವಾ ಆ ಆದೇಶದ ವಸ್ತು ವಿಷಯದ ಮೌಲ್ಯದ ಎರಡರಷ್ಟನ್ನು ಮೀರದಂತೆ ಭದ್ರತೆಯನ್ನು ಒದಗಿಸುವಂತೆ ಅಗತ್ಯಪಡಿಸಬಹುದು.

(2) ಯಾವ ನ್ಯಾಯಾಲಯದ ಮುಂದೆ ಯಾವುದೇ ಅಂಥ ಆದೇಶದ ವಸ್ತುವಿಷಯಕ್ಕೆ ಸಂಬಂಧಪಟ್ಟ ಕ್ಲೇಮು ರುಜುವಾತುಪಟ್ಟಿರುವುದೋ, ಅಂಥ ನ್ಯಾಯಾಲಯವು ಯಶಸ್ವಿ ಕ್ಲೇಮುದಾರನಿಗೆ ಬಂಧಪತ್ರವನ್ನು ಅಥವಾ ಭದ್ರತಾ ಪತ್ರವನ್ನು ವಹಿಸಿಕೊಡುವಂತೆ ಆದೇಶಿಸಬಹುದು. ಅವನು ತರುವಾಯ ಬಂಧಪತ್ರವನ್ನು ಅಮಲ್ಜಾರಿಗೊಳಿಸಲು ಹಕ್ಕುಳ್ಳವನಾಗಿರತಕ್ಕದ್ದು ಅಥವಾ ಅಂಥ ಕ್ಲೇಮಿನ ಪ್ರಮಾಣದಷ್ಟು ಭದ್ರತಾ ಪತ್ರವನ್ನು ನಗದೀಕರಿಸತಕ್ಕದ್ದು.

**17. ರಾಜಪತ್ರದಲ್ಲಿ ನೋಟೀಸುಗಳನ್ನು ಪ್ರಕಟಿಸುವುದು:–**ಈ ಅಧಿನಿಯಮದ ಮೇರೆಗೆ ಬ್ಯಾಂಕು ನೀಡಬೇಕಾದ ಯಾವುದೇ ನೋಟೀಸನ್ನು ಅಂಚೆಯ ಮೂಲಕ ಜಾರಿಗೊಳಿಸಬಹುದು. ಆದರೆ ಬ್ಯಾಂಕು ಪ್ರತಿಯೊಂದು ಅಂಥ ನೋಟೀಸನ್ನು ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ನೀಡಿದ ಭದ್ರತಾ ಪತ್ರಕ್ಕೆ ಸಂಬಂಧಿಸಿದ ನೋಟೀಸಿಗನುಸಾರವಾಗಿ, ಭಾರತ ರಾಜಪತ್ರದಲ್ಲಿ ಅಥವಾ ರಾಜ್ಯದ ರಾಜಪತ್ರದಲ್ಲಿ ಸಹ ಬ್ಯಾಂಕು ಪ್ರಕಟಿಸತಕ್ಕದ್ದು, ಮತ್ತು ಅಂಥ ಪ್ರಕಟಣೆಯ ನಂತರ ನೋಟೀಸನ್ನು ಯಾರಿಗೆ ನೀಡಲು ಉದ್ದೇಶಿಸಲಾಗಿದೆಯೋ ಆ ಎಲ್ಲಾ ವ್ಯಕ್ತಿಗಳಿಗೆ ಅದನ್ನು ನೀಡಲಾಗಿದೆ ಎಂದು ಭಾವಿಸತಕ್ಕದ್ದು.

**18. ನಿಹಿತಗೊಳಿಸುವ ಆದೇಶದ ವ್ಯಾಪ್ತಿ:–**ಈ ಅಧಿನಿಯಮದ ಮೇರೆಗೆ ಬ್ಯಾಂಕು ಮಾಡಿದ ಆದೇಶವು, ಸರ್ಕಾರಿ ಭದ್ರತಾ ಪತ್ರಕ್ಕೆ ಪೂರ್ಣ ಸ್ವಾಮ್ಯವನ್ನು ಕೊಡಬಹುದು ಅಥವಾ ಪೂರ್ಣ ಸ್ವಾಮ್ಯವನ್ನು ನಿಹಿತಗೊಳಿಸುವ ಮುಂದಿನ ಆದೇಶ ಆಗುವವರೆಗೆ ಭದ್ರತಾ ಪತ್ರದ ಮೇಲೆ ಪ್ರಾಪ್ತವಾದ ಅಥವಾ ಪ್ರಾಪ್ತವಾಗುವ ಬಡ್ಡಿಗೆ ಮಾತ್ರ ಸ್ವಾಮ್ಯವನ್ನು ಕೊಡಬಹುದು.

**19. ಬ್ಯಾಂಕು ಮಾಡಿದ ಆದೇಶಗಳ ಕಾನೂನು ಪರಿಣಾಮ:–** ಸರ್ಕಾರಿ ಭದ್ರತಾ ಪತ್ರದ ಧಾರಕನೆಂದು ವ್ಯಕ್ತಿಗೆ ಬ್ಯಾಂಕು ನೀಡಿರುವ ಯಾವುದೇ ಮಾನ್ಯತೆಯನ್ನು ಮತ್ತು ಈ ಅಧಿನಿಯಮದ ಮೇರೆಗೆ ಬ್ಯಾಂಕು ಮಾಡಿರುವ ಯಾವುದೇ ಆದೇಶವನ್ನು ಅಂಥ ಮಾನ್ಯತೆಯು ಅಥವಾ ಆದೇಶವು, ಸರ್ಕಾರಿ ಭದ್ರತಾ ಪತ್ರದ ಧಾರಕನೆಂದು ಬ್ಯಾಂಕು ಮಾನ್ಯಮಾಡಿದ ವ್ಯಕ್ತಿಯೊಂದಿಗೆ ಅಥವಾ ಅಂಥ ಭದ್ರತಾ ಪತ್ರದ ಮೇಲಿನ ಬಡ್ಡಿಯನ್ನು ಕ್ಲೇಮು ಮಾಡುವ ವ್ಯಕ್ತಿಯೊಂದಿಗೆ ಸರ್ಕಾರವು ಅಥವಾ ಬ್ಯಾಂಕು ಹೊಂದಿರುವ ಸಂಬಂಧಪಡುವಷ್ಟರಮಟ್ಟಿಗೆ, ಯಾವುದೇ ನ್ಯಾಯಾಲಯವು ಪ್ರಶ್ನಿಸತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಗೆ ಬ್ಯಾಂಕು ನೀಡಿರುವ ಯಾವುದೇ

ಅಂಥ ಮಾನ್ಯತೆಯು ಅಥವಾ ಯಾರೇ ವ್ಯಕ್ತಿಯಲ್ಲಿ ಸರ್ಕಾರಿ ಭದ್ರತಾ ಪತ್ರವನ್ನು ನಿಹಿತಗೊಳಿಸಿ ಬ್ಯಾಂಕು ಮಾಡಿರುವ ಯಾವುದೇ ಆದೇಶವು ಅವನ ಲೆಕ್ಕದಲ್ಲಿದ್ದ ಮತ್ತು ಸ್ವೀಕರಿಸಿದ್ದ ಹಣಕ್ಕೆ ಸಂಬಂಧಿಸಿದಂತೆ ಆ ಭದ್ರತಾ ಪತ್ರಕ್ಕೆ ಹಕ್ಕುಳ್ಳ ಒಡೆಯನ ವೈಯಕ್ತಿಕ ಹೊಣೆಗಾರಿಕೆಗೆ ಮಾತ್ರ ಒಳಪಟ್ಟು ಭದ್ರತಾ ಪತ್ರದ ಸ್ವಾಮ್ಯವನ್ನು ಆ ವ್ಯಕ್ತಿಗೆ ಪ್ರದಾನಮಾಡಲು ಪ್ರವರ್ತನೀಯವಾಗತಕ್ಕದ್ದು.

**20. ನ್ಯಾಯಾಲಯದ ಆದೇಶದ ಮೇಲೆ ವ್ಯಹರಣೆಗಳನ್ನು ತಡೆಹಿಡಿಯುವುದು:–** ಯಾವುದೇ ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ಯಾವ ಆದೇಶವನ್ನು ಮಾಡಲು ಬ್ಯಾಂಕಿಗೆ ಅಧಿಕಾರ ನೀಡಲಾಗಿದೆಯೋ ಆ ಯಾವುದೇ ಆದೇಶವನ್ನು ಮಾಡಲು ಬ್ಯಾಂಕು ಉದ್ದೇಶಿಸಿದಲ್ಲಿ ಮತ್ತು ಅಂಥ ಆದೇಶವನ್ನು ಮಾಡುವುದಕ್ಕೆ ಮುಂಚೆ ಬ್ಯಾಂಕು ಭಾರತದಲ್ಲಿನ ನ್ಯಾಯಾಲಯವು ಅಂಥ ಆದೇಶವನ್ನು ತಡೆಹಿಡಿಯಲು ಮಾಡಿದ ಆದೇಶವನ್ನು ಸ್ವೀಕರಿಸಿದಲ್ಲಿ, ಬ್ಯಾಂಕು,–

(ಎ) ಸಂದಾಯ ಮಾಡಿರದ ಅಥವಾ ಅದರ ಮೇಲೆ ಪ್ರಾಪ್ತವಾಗುವ ಯಾವುದೇ ಬಡ್ಡಿಯ ಸಹಿತ ಭದ್ರತಾ ಪತ್ರವನ್ನು ನ್ಯಾಯಾಲಯದಿಂದ ಮುಂದಿನ ಆದೇಶಗಳನ್ನು ಸ್ವೀಕರಿಸುವವರೆಗೆ ಧಾರಣ ಮಾಡತಕ್ಕದ್ದು; ಅಥವಾ

(ಬಿ) ನ್ಯಾಯಾಲಯದಲ್ಲಿ ವ್ಯವಹರಣೆಗಳ ವಿಲೆಯು ಇತ್ಯರ್ಥದಲ್ಲಿರುವಾಗ, ಯಾವ ರಾಜ್ಯದಲ್ಲಿ ಅಂಥ ನ್ಯಾಯಾಲಯವು ಇರುವುದೋ, ಆ ರಾಜ್ಯಕ್ಕೆ ನೇಮಕಮಾಡಲಾದ ಅಧಿಕೃತ ನ್ಯಾಸಧಾರಿಗಳಿಗೆ ಭದ್ರತಾ ಪತ್ರವನ್ನು ವರ್ಗಾಯಿಸಲು ಆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

**21. ನಿಹಿತಗೊಳಿಸುವ ವ್ಯವಹರಣೆಗಳನ್ನು ಬ್ಯಾಂಕು ರದ್ದುಪಡಿಸುವುದು:–** ಸರ್ಕಾರಿ ಭದ್ರತಾ ಪತ್ರವನ್ನು ಯಾರೇ ವ್ಯಕ್ತಿಯಲ್ಲಿ ನಿಹಿತಗೊಳಿಸಲು ಈ ಅಧಿನಿಯಮದ ಮೇರೆಗೆ ಆದೇಶವನ್ನು ಮಾಡಲು ಬ್ಯಾಂಕು ಉದ್ದೇಶಿಸಿದಲ್ಲಿ, ಬ್ಯಾಂಕು ಆ ಆದೇಶವನ್ನು ಮಾಡುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಆ ಉದ್ದೇಶಕ್ಕಾಗಿ ಈಗಾಗಲೇ ಕೈಗೊಳ್ಳಲಾಗಿರುವ ಯಾವುದೇ ವ್ಯವಹರಣೆಯನ್ನು ರದ್ದುಪಡಿಸಬಹುದು ಮತ್ತು ಹಾಗೆ ರದ್ದುಪಡಿಸಿದ ನಂತರ, ಹೊಸದಾಗಿ ಅಂಥ ಆದೇಶವನ್ನು ಮಾಡಲು ಮುಂದುವರಿಯಬಹುದು.

**22. ಸರ್ಕಾರಿ ಭದ್ರತಾ ಪತ್ರಗಳ ಮೇಲಿನ ಬಡ್ಡಿಯ ಸಂಬಂಧದಲ್ಲಿ ವಿಮೋಚನೆ:–** ಸರ್ಕಾರಿ ಭದ್ರತಾ ಪತ್ರದ ನಿಬಂಧನೆಗಳಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದುದನ್ನುಳಿದು, ಯಾರೇ ವ್ಯಕ್ತಿಯು, ಅಂಥ ಭದ್ರತಾ ಪತ್ರದ ಮೇಲೆ ಬಾಕಿಯಿರುವ ಮೊಬಲಗನ್ನು ಸಂದಾಯ ಮಾಡುವಂತೆ ತಗಾದೆ ಮಾಡಬಹುದಾಗಿದ್ದಂಥ ಅತಿ ಮುಂಚಿನ ದಿನಾಂಕದ ತರುವಾಯ ಗತಿಸಿ ಹೋದಂಥ ಯಾವುದೇ ಅವಧಿಗೆ ಸಂಬಂಧಿಸಿದಂತೆ ಅಂಥ ಯಾವುದೇ ಭದ್ರತಾ ಪತ್ರದ ಮೇಲೆ ಬಡ್ಡಿಯನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**23. ಧಾರಕ ಬಂಧಪತ್ರಗಳ ಸಂಬಂಧದಲ್ಲಿ ವಿಮೋಚನೆ:–** ಧಾರಕ ಬಂಧಪತ್ರದ ಸಂದಾಯಕ್ಕೆ ಮುಂಚೆ, ಸಂದಾಯ ಮಾಡುವ ಬಗ್ಗೆ ಸರ್ಕಾರದ ಮೇಲೆ ನಿರ್ಬಂಧ ಹೇರಿ ಭಾರತದ ನ್ಯಾಯಾಲಯವು ಸರ್ಕಾರಕ್ಕೆ ಆದೇಶವನ್ನು ಜಾರಿ ಮಾಡಿದ ಹೊರತು, ಧಾರಕ ಬಂಧಪತ್ರದ ಮೇಲಿನ ಅಥವಾ ಅಂಥ ಬಂಧಪತ್ರದ ಯಾವುದೇ ಬಡ್ಡಿಯ ಕೂಪನ್ನಿನ ಮೇಲಿನ ಎಲ್ಲಾ ಹೊಣೆಗಾರಿಕೆಗಳಿಂದ ಅದರಲ್ಲಿ ವ್ಯಕ್ತಪಡಿಸಲಾದ ಮೊಬಲಗು ಬರಬೇಕಾದ ದಿನಾಂಕದಂದು, ಅಥವಾ ತರುವಾಯ ಅದನ್ನು ಹಾಜರುಪಡಿಸಿದ ಮೇಲೆ ಅಂಥ ಬಂಧಪತ್ರದ ಅಥವಾ ಕೂಪನ್ನಿನ ಧಾರಕನಿಗೆ ಹಣ ಸಂದಾಯ ಮಾಡಿದ ಮೇಲೆ ಸರ್ಕಾರವು ವಿಮೋಚಿತವಾಗತಕ್ಕದ್ದು.

**24. ಬಡ್ಡಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಹೊಣೆಗಾರಿಕೆಯ ಕಾಲಪರಿಮಿತಿಯ ಅವಧಿ:–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಲ್ಪಾವಧಿಯ ಕಾಲಪರಿಮಿತಿಯನ್ನು ನಿಗದಿಪಡಿಸದೇ ಇರುವಾಗ, ಸರ್ಕಾರಿ ಭದ್ರತಾ ಪತ್ರದ ಮೇಲೆ ಕೊಡಬೇಕಾಗಿರುವ ಯಾವುದೇ ಬಡ್ಡಿಯ ಸಂದಾಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಹೊಣೆಗಾರಿಕೆಯು, ಬಡ್ಡಿಯ ರೂಪದಲ್ಲಿ ಬಾಕಿಯಿರುವ ಮೊಬಲಗನ್ನು ಸಂದಾಯ ಮಾಡಬೇಕಾದ ದಿನಾಂಕದಿಂದ ಆರು ವರ್ಷಗಳ ಅವಧಿಯು ಮುಕ್ತಾಯವಾದ ಮೇಲೆ ಕೊನೆಗೊಳ್ಳತಕ್ಕದ್ದು.

**25. ದಸ್ತಾವೇಜುಗಳ ಪರಿಶೀಲನೆ:–** ಯಾರೇ ವ್ಯಕ್ತಿಯು, ನಿಯಮಿಸಬಹುದಾದಂಥ ಸಂದರ್ಭಗಳಲ್ಲಿ ಮತ್ತು ರೀತಿಯಲ್ಲಿ ಹಾಗೂ ಅಂಥ ಷರತ್ತುಗಳಿಗೆ ಒಳಪಟ್ಟ ಹೊರತು, ಸರ್ಕಾರದ ಸ್ವಾಧೀನದಲ್ಲಿರುವ ಅಥವಾ ಅಭಿರಕ್ಷೆಯಲ್ಲಿರುವ ಯಾವುದೇ ಸರ್ಕಾರಿ ಭದ್ರತಾ ಪತ್ರದಿಂದ ಅಥವಾ ಸರ್ಕಾರಿ ಭದ್ರತಾ ಪತ್ರಗಳಿಗೆ ಅಥವಾ ಯಾವುದೇ ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಸರ್ಕಾರವು ಅಥವಾ ಅದರ ಪರವಾಗಿ ಇಟ್ಟಿರುವ ಅಥವಾ ನಿರ್ವಹಿಸಿರುವ ಯಾವುದೇ ಪುಸ್ತಕವನ್ನು, ರಿಜಿಸ್ಟರನ್ನು, ಅಥವಾ ಇತರ ದಸ್ತಾವೇಜನ್ನು ಪರಿಶೀಲಿಸಲು, ಅಥವಾ ಅವುಗಳಿಂದ ದೊರೆಯುವ ಮಾಹಿತಿಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**26. ಬ್ಯಾಂಕನ್ನು ಮತ್ತು ಅದರ ಅಧಿಕಾರಿಗಳನ್ನು ಲೋಕ ನೌಕರರೆಂದು ಭಾವಿಸತಕ್ಕದ್ದು:–** ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರ 124ನೇ ಪ್ರಕರಣದ ಉದ್ದೇಶಗಳಿಗಾಗಿ, ತಮ್ಮ ಪದೀಯ ಸಾಮರ್ಥ್ಯದಲ್ಲಿ ಲೋಕ ನೌಕರರು ಹೂಡುವ ಅಥವಾ ಅವರ ವಿರುದ್ಧ ಹೂಡುವ ದಾವೆಗಳಿಗೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಭಾಗ IVರ ಉಪಬಂಧಗಳ ಹಾಗೂ ಸದರಿ ಸಂಹಿತೆಯ ಕ್ರಮಾದೇಶ Vರ ನಿಯಮ 27ರ ಮತ್ತು ಕ್ರಮಾದೇಶ XXIರ ನಿಯಮ 52ರ ಉಪಬಂಧಗಳ ಉದ್ದೇಶಗಳಿಗಾಗಿ ಹಾಗೆ ಅಂಥ ತನ್ನ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕನ್ನು ಮತ್ತು ಬ್ಯಾಂಕಿನ ಯಾರೇ ಅಧಿಕಾರಿಯನ್ನು ಲೋಕ ನೌಕರರೆಂದು ಭಾವಿಸತಕ್ಕದ್ದು.

**27. ದಂಡ:–** (1) ಯಾರೇ ವ್ಯಕ್ತಿಯು, ತನಗಾಗಿ ಅಥವಾ ಯಾರೇ ಇತರ ವ್ಯಕ್ತಿಗಾಗಿ ಸರ್ಕಾರಿ ಭದ್ರತಾ ಪತ್ರದ ಯಾವುದೇ ಸ್ವಾಮ್ಯವನ್ನು ಪಡೆಯುವ ಉದ್ದೇಶಕ್ಕಾಗಿ, ಈ ಅಧಿನಿಯಮದ ಮೇರೆಗೆ ಸಲ್ಲಿಸಲಾದ ಯಾವುದೇ ಅರ್ಜಿಯಲ್ಲಿ ಈ ಅಧಿನಿಯಮದ ಮೇರೆಗೆ ಯಾವುದೇ ಪ್ರಾಧಿಕಾರಕ್ಕೆ ಅಥವಾ ಈ ಅಧಿನಿಯಮದ ಅನುಸಾರ ಕೈಗೊಂಡ ಯಾವುದೇ ವಿಚಾರಣೆಯ ಕ್ರಮದಲ್ಲಿ ಸುಳ್ಳು ಹೇಳಿಕೆಯನ್ನು ಮತ್ತು ಸುಳ್ಳೆಂದು ತಾನು ತಿಳಿದಿರುವಂಥ ಅಥವಾ ನಿಜವಾದುದೆಂದು ತಾನು ನಂಬದಿರುವಂಥ ಹೇಳಿಕೆಯನ್ನು

ನೀಡಿದರೆ ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಬ್ಯಾಂಕಿನ ದೂರಿನ ಮೇಲೆ ಹೊರತು, ಯಾವುದೇ ನ್ಯಾಯಾಲಯವು (1)ನೇ ಉಪಪ್ರಕರಣದ ಮೇರೆಗಿನ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**28. ನಿಯಮಗಳನ್ನು ರಚಿಸಲು ಅಧಿಕಾರ:**–(1) ಕೇಂದ್ರ ಸರ್ಕಾರವು ಪೂರ್ವ ಪ್ರಕಟಣೆಯ ಷರತ್ತುಗಳಿಗೆ ಒಳಪಟ್ಟು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಯಾವ ನಮೂನೆಯಲ್ಲಿ ಸರ್ಕಾರಿ ಭದ್ರತಾ ಪತ್ರಗಳನ್ನು ನೀಡಬಹುದೋ ಆ ನಮೂನೆಗಳು;

(ಬಿ) 2ನೇ ಪ್ರಕರಣದ (2)ನೇ ಖಂಡದ (ಎ) ಉಪಖಂಡದ (iv)ನೇ ಖಂಡದಲ್ಲಿ ಉಲ್ಲೇಖಿಸಲಾದ ಬಾಧ್ಯತೆಗಳ ನಮೂನೆ;

(ಸಿ) ಹಿಂದಿನ ಭಾರತದ ರಾಜ್ಯಗಳ ರಾಜರುಗಳಿಗೆ ಯಾವ ಷರತ್ತುಗಳಿಗೆ ಒಳಪಟ್ಟು ಸರ್ಕಾರಿ ಭದ್ರತಾ ಪತ್ರಗಳನ್ನು ನೀಡಬಹುದೋ ಆ ಷರತ್ತುಗಳು;

(ಡಿ) ಬೇರೆ ಬೇರೆ ಪ್ರಕಾರಗಳ ಸರ್ಕಾರಿ ಭದ್ರತಾ ಪತ್ರಗಳನ್ನು ವರ್ಗಾಯಿಸಬಹುದಾದ ರೀತಿ;

(ಇ) ಸರ್ಕಾರಿ ಹುದ್ದೆಗಳನ್ನು ಹೊರತುಪಡಿಸಿ ಇತರ ಹುದ್ದೆಗಳ ಧಾರಕರು ಸ್ಟಾಕ್ ರೂಪದಲ್ಲಿ ಸರ್ಕಾರಿ ಭದ್ರತಾ ಪತ್ರಗಳನ್ನು ಧಾರಣ ಮಾಡುವುದು ಮತ್ತು ಹಾಗೆ ಧಾರಣ ಮಾಡಿರುವ ಸರ್ಕಾರಿ ಭದ್ರತಾ ಪತ್ರಗಳನ್ನು ಯಾವ ರೀತಿಯಲ್ಲಿ ಹಾಗೂ ಯಾವ ಷರತ್ತುಗಳಿಗೆ ಒಳಪಟ್ಟು ವರ್ಗಾಯಿಸಬಹುದೋ ಆ ರೀತಿ ಮತ್ತು ಷರತ್ತುಗಳು;

(ಎಫ್) ಸರ್ಕಾರಿ ಭದ್ರತಾ ಪತ್ರಗಳಿಗೆ ಸಂಬಂಧಿಸಿದಂತೆ ಯಾವ ರೀತಿಯಲ್ಲಿ ಬಡ್ಡಿಯನ್ನು ಸಂದಾಯ ಮಾಡಬೇಕೋ ಮತ್ತು ಅದಕ್ಕೆ ಯಾವ ರೀತಿಯಲ್ಲಿ ಸ್ವೀಕೃತಿ ನೀಡಬೇಕೋ ಆ ರೀತಿ;

(ಜಿ) ಸರ್ಕಾರಿ ಭದ್ರತಾ ಪತ್ರಗಳ ದ್ವಿಪ್ರತಿಯನ್ನು ನೀಡುವುದಕ್ಕೆ, ಸರ್ಕಾರಿ ಭದ್ರತಾ ಪತ್ರಗಳನ್ನು ನವೀಕರಿಸುವುದಕ್ಕೆ, ಪರಿವರ್ತಿಸುವುದಕ್ಕೆ, ಕ್ರೋಢೀಕರಿಸುವುದಕ್ಕೆ ಮತ್ತು ಉಪವಿಭಾಗಿಸುವುದಕ್ಕೆ ಅನ್ವಯಿಸುವ ಷರತ್ತುಗಳು;

(ಎಚ್) ಸರ್ಕಾರಿ ಭದ್ರತಾ ಪತ್ರಗಳ ದ್ವಿಪ್ರತಿಯನ್ನು ನೀಡುವುದಕ್ಕೆ ಮತ್ತು ಸರ್ಕಾರಿ ಭದ್ರತಾ ಪತ್ರಗಳ ನವೀಕರಣಕ್ಕೆ, ಪರಿವರ್ತನೆಗೆ, ಕ್ರೋಢೀಕರಣಕ್ಕೆ ಮತ್ತು ಉಪವಿಭಾಗಿಸುವುದಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಫೀಜುಗಳು;

(ಐ) ವಿಮೋಚನೆಗಾಗಿ, ನವೀಕರಣಕ್ಕಾಗಿ, ಪರಿವರ್ತನೆಗಾಗಿ, ಕ್ರೋಢೀಕರಣಕ್ಕಾಗಿ ಅಥವಾ ಉಪವಿಭಾಗಿಸುವುದಕ್ಕಾಗಿ ವಶಾವಣೆ ಮಾಡಿದ ಸರ್ಕಾರಿ ಭದ್ರತಾ ಪತ್ರವನ್ನು ಸ್ವೀಕರಿಸಿದ ಬಗ್ಗೆ ಯಾವ ನಮೂನೆಯಲ್ಲಿ ಸ್ವೀಕೃತಿಯನ್ನು ನೀಡಬೇಕೋ ಆ ನಮೂನೆ;

(ಜೆ) ಸ್ಟಾಕ್ ರೂಪದಲ್ಲಿರುವ ಸರ್ಕಾರಿ ಭದ್ರತಾ ಪತ್ರಗಳಿಗೆ ಸಂಬಂಧಪಟ್ಟ ದಸ್ತಾವೇಜುಗಳನ್ನು ದೃಢೀಕರಿಸುವ ರೀತಿ;

(ಕೆ) ಯಾವುದೇ ಕಾರಣದಿಂದ ಬರೆಯಲು ಅಸಮರ್ಥನಾಗಿರುವ ಯಾರೇ ವ್ಯಕ್ತಿಯ ಕೋರಿಕೆಯ ಮೇಲೆ ಸರ್ಕಾರವು ಹೊರಡಿಸಿದ ಸರ್ಕಾರಿ ಭದ್ರತಾ ಪತ್ರಗಳಿಗೆ ಸಂಬಂಧಪಟ್ಟ ಯಾವುದೇ ದಸ್ತಾವೇಜಿನ ಅಥವಾ ಸರ್ಕಾರಿ ಪ್ರಾಮಿಸರಿ ನೋಟಿನ ಮೇಲೆ ಯಾವುದೇ ಹಿಂಬರಹವನ್ನು ಅವನ ಪರವಾಗಿ ಬರೆದುಕೊಡಬಹುದಾದಂಥ ರೀತಿ;

(ಎಲ್) 16ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಬಂಧಪತ್ರಗಳ ನಮೂನೆ;

(ಎಂ) ಯಾವ ಸಂದರ್ಭಗಳಲ್ಲಿ ಮತ್ತು ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಭದ್ರತಾ ಪತ್ರಗಳ, ಪುಸ್ತಕಗಳ, ರಿಜಿಸ್ಟರುಗಳ ಮತ್ತು ಇತರ ದಸ್ತಾವೇಜುಗಳ ಪರಿಶೀಲನೆಗೆ 25ನೇ ಪ್ರಕರಣದ ಮೇರೆಗೆ ಅವಕಾಶ ಕೊಡಬಹುದೋ ಅಥವಾ ಅವುಗಳಿಂದ ಮಾಹಿತಿಯನ್ನು ಕೊಡಬಹುದೋ ಆ ಸಂದರ್ಭಗಳು ಮತ್ತು ರೀತಿ ಮತ್ತು ಷರತ್ತುಗಳು;

(ಎನ್) ನಿಹಿತಗೊಳಿಸುವ ಆದೇಶಗಳನ್ನು ಮಾಡುವಾಗ ಅನುಸರಿಸಬೇಕಾದ ಪ್ರಕ್ರಿಯೆ;

(ಓ) 7ನೇ ಪ್ರಕರಣದ ಪರಂತುಕದಲ್ಲಿ ಹೇಳಲಾದ ಪ್ರಮಾಣಪತ್ರವನ್ನು ನೀಡುವಂಥ ಪ್ರಾಧಿಕಾರ ಮತ್ತು ಅದರಲ್ಲಿ ಹೇಳಿದಂತೆ ವಿಚಾರಣೆ ನಡೆಸುವ ರೀತಿ;

(ಪಿ) 9ಬಿ ಪ್ರಕರಣದ ಮೇರೆಗೆ ಯಾವ ನಮೂನೆಯಲ್ಲಿ ಮತ್ತು ಯಾರ ಪರವಾಗಿ ನಾಮ ನಿರ್ದೇಶನವನ್ನು ಮಾಡಬಹುದೋ ಆ ನಮೂನೆ ಮತ್ತು ಆ ವ್ಯಕ್ತಿಗಳು, ಯಾವ ರೀತಿ ಮತ್ತು ಯಾವ ಷರತ್ತುಗಳಿಗೆ ಮತ್ತು ಯಾವ ನಿರ್ಬಂಧಗಳಿಗೆ ಒಳಪಟ್ಟು ಅಂಥ ನಾಮನಿರ್ದೇಶನಗಳನ್ನು ಮಾಡಬಹುದೋ ಆ ರೀತಿ ಮತ್ತು

ಷರತ್ತುಗಳು ಮತ್ತು ನಿರ್ಬಂಧಗಳು, ಅಂಥ ನಾಮನಿರ್ದೇಶನಗಳನ್ನು ನೋಂದಾಯಿಸುವುದು, ಮಾರ್ಪಾಡು ಗೊಳಿಸುವುದು ಅಥವಾ ರದ್ದುಪಡಿಸುವುದು ಮತ್ತು ಅಂಥ ನೋಂದಾಯಿಸುವಿಕೆಗೆ, ಮಾರ್ಪಾಟುಗೊಳಿಸುವಿಕೆಗೆ ಅಥವಾ ರದ್ದುಪಡಿಸುವಿಕೆಗೆ ವಿಧಿಸಬಹುದಾದ ಫೀಜುಗಳು;

(ಕ್ಯೂ) 9ಬಿ ಪ್ರಕರಣದ (4)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಯಾರೇ ವ್ಯಕ್ತಿಯನ್ನು ನೇಮಕ ಮಾಡಬಹುದಾದ ರೀತಿ;

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನವು ಅಥವಾ ಒಂದಾದಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಡು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**29. ಕೆಲವು ಕಾನೂನುಗಳು ಸರ್ಕಾರಿ ಭದ್ರತಾ ಪತ್ರಗಳಿಗೆ ಅನ್ವಯಿಸುವುದಿಲ್ಲ:-** ಭಾರತ ಭದ್ರತಾ ಪತ್ರಗಳ ಅಧಿನಿಯಮ, 1920 (1920ರ 10) ಮತ್ತು ಸಾರ್ವಜನಿಕ ಋಣ (ತಿದ್ದುಪಡಿ) ಅಧಿನಿಯಮ, 1956 (1956ರ 57)ರ ಪ್ರಾರಂಭದ ನಿಕಟಪೂರ್ವದಲ್ಲಿ ಬಿ - ಭಾಗದ ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿದ್ದ ಕಾನೂನಿಗೆ ಸಂವಾದಿಯಾಗಿರುವ ಯಾವುದೇ ಕಾನೂನು, ಈ ಅಧಿನಿಯಮವು ಅನ್ವಯವಾಗುವ ಸರ್ಕಾರಿ ಭದ್ರತಾ ಪತ್ರಗಳಿಗೆ ಮತ್ತು ಈ ಅಧಿನಿಯಮದ ಮೇರೆಗೆ ಉಪಬಂಧ ಕಲ್ಪಿಸಲಾದ ಎಲ್ಲಾ ವಿಷಯಗಳಿಗೆ ಅನ್ವಯವಾಗುವುದು ನಿಂತು ಹೋಗತಕ್ಕದ್ದು;

ಪರಂತು, ಯಾವುದೇ ಅಂಥ ಸಂವಾದಿ ಕಾನೂನು, 1953ರ ಮಾರ್ಚ್ 31 ರಂದು ಅಥವಾ ಅದಕ್ಕೂ ಮುಂಚೆ ಹೈದರಾಬಾದ್, ಸೌರಾಷ್ಟ್ರ ಅಥವಾ ತಿರುವಾಂಕೂರ್ - ಕೊಚ್ಚಿನ್ ಸರ್ಕಾರದಿಂದ ಸೃಷ್ಟಿಸಲಾದ ಮತ್ತು ಹೊರಡಿಸಲಾದ ಯಾವುದೇ ಭದ್ರತಾ ಪತ್ರಗಳಿಗೆ ಅಥವಾ ಅವುಗಳಿಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಸಾರ್ವಜನಿಕ ಋಣ (ತಿದ್ದುಪಡಿ) ಅಧಿನಿಯಮ, 1956 (1956ರ 57)ರ ಪ್ರಾರಂಭದ ದಿನದಿಂದ ಒಂದು ವರ್ಷ ಮೀರದ ಅಂಥ ಅವಧಿಗೆ ಅನ್ವಯವಾಗುವುದು ಮುಂದುವರಿಯತಕ್ಕದ್ದು.

**30. ಬಿ - ಭಾಗದ ರಾಜ್ಯಗಳಲ್ಲಿ 1951ರ ಏಪ್ರಿಲ್ 1ಕ್ಕೂ ಮುಂಚೆ ಜಾರಿಯಲ್ಲಿರದ ಕಾನೂನುಗಳ ಉಲ್ಲೇಖವನ್ನು ಅರ್ಥೈಸುವುದು:-** ಬಿ - ಭಾಗದ ರಾಜ್ಯಗಳ (ಕಾನೂನು) ಅಧಿನಿಯಮ, 1951 (1951ರ 3)ರ ಪ್ರಾರಂಭಕ್ಕೂ ಮುಂಚೆ ಬಿ - ಭಾಗದ ರಾಜ್ಯಕ್ಕೆ ಅಥವಾ ಅಂಥ ರಾಜ್ಯದ ಯಾವುದೇ ಭಾಗಕ್ಕೆ ವ್ಯಾಪ್ತವಾಗದ ಯಾವುದೇ ಕಾನೂನಿಗೆ ಈ ಅಧಿನಿಯಮದ ಯಾವುದೇ ಉಲ್ಲೇಖವು, ಅವಶ್ಯವಿರುವಲ್ಲೆಲ್ಲ, ಆ ರಾಜ್ಯದಲ್ಲಿ ಅಥವಾ ಸಂದರ್ಭಾನುಸಾರ, ಅದರ ಯಾವುದೇ ಭಾಗದಲ್ಲಿ ಸದರಿ ದಿನಾಂಕಕ್ಕೂ ಮುಂಚೆ, ಜಾರಿಯಲ್ಲಿರುವ ಸಂವಾದಿ ಕಾನೂನು ಯಾವುದಾದರೂ ಇದ್ದರೆ, ಅದರ ಉಲ್ಲೇಖವನ್ನು ಒಳಗೊಂಡಿರುವುದಾಗಿ ಅರ್ಥೈಸತಕ್ಕದ್ದು.

**31. ಜಮ್ಮು ಮತ್ತು ಕಾಶ್ಮೀರದಲ್ಲಿ ಜಾರಿಯಲ್ಲಿರದ ಕಾನೂನುಗಳ ಉಲ್ಲೇಖಗಳನ್ನು ಅರ್ಥೈಸುವುದು:-**ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿರದ ಕಾನೂನಿಗೆ ಈ ಅಧಿನಿಯಮದಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು, ಅವಶ್ಯವಿರುವಲ್ಲೆಲ್ಲ, ಆ ರಾಜ್ಯದಲ್ಲಿ ಸಂವಾದಿ ಕಾನೂನು ಯಾವುದಾದರೂ ಇದ್ದರೆ, ಅದರ ಉಲ್ಲೇಖವನ್ನು ಒಳಗೊಂಡಿರುವುದಾಗಿ ಅರ್ಥೈಸತಕ್ಕದ್ದು.

* * * * *